**ಕರ್ನಾಟಕ ಸರ್ಕಾರ**
**(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)**

**ಸಂಖ್ಯೆ: ಸನೀಇ 361 ಎಂಐಎಸ್‌ಯು 2023**

**ಕರ್ನಾಟಕ ಸರ್ಕಾರದ ಸಚಿವಾಲಯ,**
**ಡಾ. ಬಿ.ಆರ್. ಅಂಬೇಡ್ಕರ್ ವೀದಿ,**
**ವಿಕಾಸ ಸೌಧ,**
**ಬೆಂಗಳೂರು, ದಿನಾಂಕ: 28.05.2025.**

## ಅಧಿಸೂಚನೆ

**ಕರ್ನಾಟಕ ಸಣ್ಣ ನೀರಾವರಿ ಇಲಾಖೆ ಸೇವೆಗಳ (ವೃಂದ ಮತ್ತು ನೇಮಕಾತಿ) ನಿಯಮಗಳು, 2025 ನ್ನು** ರಚಿಸುವುದಕ್ಕೆ ಅಧಿಸೂಚನೆ ಸಂಖ್ಯೆ : ಸನೀಇ 361 ಎಂ ಐಎಸ್ ಯು 2023, ದಿನಾಂಕ: 06/01/2025 ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 09/01/2025ರ ಕರ್ನಾಟಕ ರಾಜ್ಯ ಪತ್ರದ ಭಾಗ-IVಎ ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ-14) ರ, 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡವನ್ನು ಪ್ರಕರಣ 8ರೊಂದಿಗೆ ಓದಿಕೊಂಡು ಅದರಲ್ಲಿ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ ;

ಸದರಿ ರಾಜ್ಯ ಪತ್ರವನ್ನು ದಿನಾಂಕ: 06/01/2025 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ :

ಮತ್ತು ಸದರಿ ಕರಡಿನ ಬಗ್ಗೆ ಸ್ವೀಕೃತವಾದ ಆಕ್ಷೇಪಣೆ /ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಶೀಲಿಸಿರುವುದರಿಂದ :

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ-14) ರ, 3ನೇ ಪ್ರಕರಣದ (1)ನೇ ಉಪ-ಪ್ರಕರಣವನ್ನು 8 ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ , ಎಂದರೆ:-

## ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ:-**

(1) ಈ ನಿಯಮಗಳನ್ನು ಕರ್ನಾಟಕ ಸಣ್ಣ ನೀರಾವರಿ ಇಲಾಖೆ ಸೇವೆಗಳ (ವೃಂದ ಮತ್ತು ನೇಮಕಾತಿ) ನಿಯಮಗಳು, 2025 ಎಂದು ಕರೆಯತಕ್ಕದ್ದು;

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು;

**2. ಆಯ್ಕೆಗಳ ಸಲ್ಲಿಕೆ:-** ಈ ನಿಯಮಗಳ ಪ್ರಾರಂಭದ ದಿನಾಂಕದಂದು ಮತ್ತು ಅಂಥ ಪ್ರಾರಂಭದ ದಿನಾಂಕದಿಂದ ಹಾಗೆ ನಲವತ್ತೈದು ದಿನಗಳ ಅವಧಿಯೊಳಗೆ ಸಣ್ಣ ನೀರಾವರಿ ಇಲಾಖೆಯಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಜಲಸಂಪನ್ಮೂಲ ಇಲಾಖೆಯ ನೌಕರರು ಹಾಗೂ ಲೋಕೋಪಯೋಗಿ ಇಲಾಖೆ ಅಥವಾ ಜಲಸಂಪನ್ಮೂಲ ಇಲಾಖೆಯಿಂದ ನೇಮಕಗೊಂಡ ನೌಕರರು ಸಣ್ಣ ನೀರಾವರಿ ಇಲಾಖೆಯಲ್ಲಿ ವಿಲೀನಗೊಳ್ಳಲು ಇಚ್ಚಿಸಿದ್ದಲ್ಲಿ, (ಅನುಸೂಚಿ-III ರಲ್ಲಿ ನಿರ್ದಿಷ್ಟಪಡಿಸಿದಂತೆ). ಕರ್ನಾಟಕ ಸಣ್ಣ ನೀರಾವರಿ ಸೇವೆಗಳಲ್ಲಿ ವಿಲೀನಗೊಳ್ಳಲು ರದ್ದುಪಡಿಸಲಾಗದ ಆಯ್ಕೆಯನ್ನು ಚಲಾಯಿಸತಕ್ಕದ್ದು, ಹಾಗೆ ವಿಲೀನಗೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿರುವ ವ್ಯಕ್ತಿಗಳ ಜ್ಯೇಷ್ಠತೆಯನ್ನು, ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತಾ) ನಿಯಮಗಳು, 1957ರೊಂದಿಗೆ ಅನುಗುಣವಾಗಿ ಅವರ ಮಾತೃ ಇಲಾಖೆಯಲ್ಲಿನ ಆಂತರಿಕ ಜ್ಯೇಷ್ಠತೆಯನ್ನು ಪರಿಗಣಿಸಿ ನಿರ್ಧರಿಸತಕ್ಕದ್ದು, ಕರ್ನಾಟಕ ಸಣ್ಣ ನೀರಾವರಿ ಸೇವೆಗಳ ಇಲಾಖೆಯಲ್ಲಿ ವಿಲೀನಗೊಳ್ಳಲು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸದ ನೌಕರರನ್ನು ಈ ಸೇವೆಯಲ್ಲಿ 'ನಿಯೋಜನೆಯಲ್ಲಿದ್ದಂತೆ' ಎಂದು ಪರಿಗಣಿಸತಕ್ಕದ್ದು.

**3. ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆ ಇತ್ಯಾದಿ:-** ಕರ್ನಾಟಕ ಸಣ್ಣ ನೀರಾವರಿ ಸೇವೆಗಳ ಇಲಾಖೆಯು ಈ ಕೆಳಕಂಡ ಅನುಸೂಚಿಯ-1 ರ ಅಂಕಣ-2 ರಲ್ಲಿ ನಿರ್ದಿಷ್ಟಪಡಿಸಿರುವ ಹುದ್ದೆಗಳ ಪ್ರವರ್ಗಗಳು ಮತ್ತು ವೇತನ ಶ್ರೇಣಿಗಳನ್ನು ಒಳಗೊಂಡಿರತಕ್ಕದ್ದು, ಹುದ್ದೆಗಳ ಸಂಖ್ಯೆ, ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆಗಳು ಅದರ (3), (4), (5) ಮತ್ತು (6)ನೇ ಸಂವಾದಿ ಅಂಕಣಗಳಲ್ಲಿ ನಮೂದಿಸಿರುವಂತೆ ನಿರ್ದಿಷ್ಟಪಡಿಸಿರತಕ್ಕದ್ದು.

**4. ಕರ್ನಾಟಕ ಜಲಸಂಪನ್ಮೂಲ ಸೇವೆಗಳು (ನೇಮಕಾತಿ) ನಿಯಮಗಳು, 2014ರ ತಿದ್ದುಪಡಿ:-**
ಈ ನಿಯಮಗಳ ಪ್ರಾರಂಭದ ದಿನಾಂಕದಂದು ಮತ್ತು ಆ ದಿನಾಂಕದಿಂದ, ಕರ್ನಾಟಕ ಜಲಸಂಪನ್ಮೂಲ ಸೇವೆಗಳಿಂದ ವರ್ಗಾವಣೆ ಹೊಂದಿರುವ ಈ ನಿಯಮಗಳ 3ನೇ ನಿಯಮದಲ್ಲಿ ನಮೂದಿಸಲಾದ ಹುದ್ದೆಗಳನ್ನು ಕರ್ನಾಟಕ ಜಲಸಂಪನ್ಮೂಲ ಸೇವೆಗಳು (ನೇಮಕಾತಿ) ನಿಯಮಗಳು, 2014ರಿಂದ ಬಿಟ್ಟುಬಿಡತಕ್ಕದ್ದು, ಮತ್ತು ಸಂಖ್ಯಾ ಬಲವು ಅಧಿಸೂಚನೆಗಳಲ್ಲಿರುವಂತೆ ಇರತಕ್ಕದ್ದು.

**5. ಉಳಿಸುವಿಕೆಗಳು:-** ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ನಿಯಮಗಳ ಪ್ರಾರಂಭಕ್ಕೆ ಮುಂಚಿತವಾಗಿ ಸರ್ಕಾರದ ಆದೇಶಕ್ಕೆ ಅನುಗುಣವಾಗಿ ಹುದ್ದೆಗಳ ಯಾವುದೇ ಪ್ರವರ್ಗಗಳ ನೇಮಕಾತಿ ಅಥವಾ ನೌಕರಿ ಭರ್ತಿಗೆ ಈಗಾಗಲೇ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲಾಗಿದ್ದರೆ, ಅವುಗಳನ್ನು ಈ ನಿಯಮಗಳಡಿ ಮಾಡಲಾದವುಗಳಾದರೆ ಹೇಗೋ ಹಾಗೆ ಉಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಪಂಪನಗೌಡ ಮೇಲ್ಸೀಮೆ)**
ಸರ್ಕಾರದ ಜಂಟಿ ಕಾರ್ಯದರ್ಶಿ
ಸಣ್ಣ ನೀರಾವರಿ ಮತ್ತು ಅಂತರ್ಜಲ
ಅಭಿವೃದ್ಧಿ ಇಲಾಖೆ.

## ಅನುಸೂಚಿ-I
### (ನಿಯಮ 3ನ್ನು ನೋಡಿ)

| ಕ್ರ. ಸಂ. | ಹುದ್ದೆಯ ಪ್ರವರ್ಗ ಮತ್ತು ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | | | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|---|---|
| | | ಖಾಯಂ | ತಾತ್ಕಾಲಿಕ | ನಿಯೋಜನೆ | | |
| 1 | 2 | 3 | 4 | 5 | 6 | 7 |
| 1 | ಮುಖ್ಯ ಇಂಜಿನಿಯರ್ (ಚೀಫ್ ಇಂಜಿನಿಯರ್) (ರೂ.144700-197200) | 01 | 01 | 01 | ಅಧೀಕ್ಷಕ ಇಂಜಿನಿಯರ್ ವೃಂದದಿಂದ ಆಯ್ಕೆ ಮೂಲಕ ಮುಂಬಡ್ತಿ ನೀಡುವ ಮೂಲಕ | ಅಧೀಕ್ಷಕ ಇಂಜಿನಿಯರ್ ವೃಂದದಲ್ಲಿ ಕನಿಷ್ಠ ಎರಡು ವರ್ಷಕ್ಕಿಂತ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರಬೇಕು. |
| 2 | ಅಧೀಕ್ಷಕ ಇಂಜಿನಿಯರ್ (ಸೂಪರಿಂಡೆಂಟ್ ಇಂಜಿನಿಯರ್) (ರೂ.118700-175200) | 00 | 05 | - | ಕಾರ್ಯಪಾಲಕ ಇಂಜಿನಿಯರ್ ವೃಂದದಿಂದ ಮುಂಬಡ್ತಿ ಮೂಲಕ | ಕಾರ್ಯಪಾಲಕ ಇಂಜಿನಿಯರ್ ವೃಂದದಲ್ಲಿ ಕನಿಷ್ಠ ಮೂರು ವರ್ಷಗಳ ಅವಧಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರಬೇಕು. |
| 3 | ಜಂಟಿ ನಿರ್ದೇಶಕರು (ಸಾಂಖ್ಯಿಕ) (ರೂ.118700-175200) | 00 | 01 | - | ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ತತ್ಸಮಾನ ವೃಂದದಲ್ಲಿನ ಅಧಿಕಾರಿಯನ್ನು ನಿಯೋಜನೆ ಮಾಡುವ ಮೂಲಕ | |
| 4 | ಕಾರ್ಯಪಾಲಕ ಇಂಜಿನಿಯರ್ (ರೂ. 107500-167200) | 00 | 21 | 01 | ಸಹಾಯಕ ಕಾರ್ಯಪಾಲಕ ಇಂಜಿನಿಯರ್/ತಾಂತ್ರಿಕ ಸಹಾಯಕ (ವಿಭಾಗ-1) ವೃಂದದಿಂದ ಮುಂಬಡ್ತಿಯ ಮೂಲಕ | ಸಹಾಯಕ ಕಾರ್ಯಪಾಲಕ ಇಂಜಿನಿಯರ್/ ತಾಂತ್ರಿಕ ಸಹಾಯಕ (ವಿಭಾಗ-1) ವೃಂದದಲ್ಲಿ ಕನಿಷ್ಟ ಮೂರು ವರ್ಷಕ್ಕಿಂತ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರಬೇಕು. |

| | | | | | | |
|---|---|---|---|---|---|---|
| 5 | ಸಹಾಯಕ ಕಾರ್ಯಪಾಲಕ ಇಂಜಿನಿಯರ್ / ತಾಂತ್ರಿಕ ಸಹಾಯಕರು – ವಿಭಾಗ-1 (ರೂ. 83700-155200) | 05 | 69 | 04 | 1) ಸಹಾಯಕ ಇಂಜಿನಿಯರ್ - ವಿಭಾಗ-1 ವೃಂದದಿಂದ ಮುಂಬಡ್ತಿಯ ಮೂಲಕ ಶೇಕಡಾ ಎಪ್ಪತ್ತರಷ್ಟು;<br>2) ಅನುಬಂಧಿಸಿರುವ ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿರುವ ಪರೀಕ್ಷಾ ಯೋಜನೆಯ ಅನುಸಾರವಾಗಿ; ನೇರ ನೇಮಕಾತಿ ಮೂಲಕ ಶೇಕಡಾ ಇಪ್ಪತ್ತರಷ್ಟು; ಮತ್ತು<br>3) ಪರೀಕ್ಷಾ ಯೋಜನೆಗೆ ಅನುಗುಣವಾಗಿ ನೇರ ನೇಮಕಾತಿಗಾಗಿ ನಿರ್ದಿಷ್ಟಪಡಿಸಿರುವ ವಿದ್ಯಾರ್ಹತೆಗಳನ್ನು ಹೊಂದಿರುವ ಸಣ್ಣ ನೀರಾವರಿ ಇಲಾಖೆಗೆ ಸೇರಿದ ಸಮೂಹ – ಸಿ ದರ್ಜೆಗಿಂತ ಕಡಿಮೆಯಿಲ್ಲದಂತೆ ಸೇವೆಯಲ್ಲಿರುವ ಅಧಿಕಾರಿಗಳ ಪೈಕಿ ನೇರ ನೇಮಕಾತಿ ಮೂಲಕ ಶೇಕಡಾ ಹತ್ತರಷ್ಟು. | **ಮುಂಬಡ್ತಿಗಾಗಿ:-**<br>(1) ಸಿವಿಲ್ ಇಂಜಿನಿಯರ್ ಅಥವಾ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಪದವಿ ಅಥವಾ ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು;<br>(2) ಸಹಾಯಕ ಇಂಜಿನಿಯರ್ ವೃಂದದಲ್ಲಿ ಕನಿಷ್ಠ ಐದು ವರ್ಷಗಳ ಅವಧಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರಬೇಕು;<br>ಪರಂತು, ಐದು ವರ್ಷ ಸೇವೆ ಸಲ್ಲಿಸಿರುವ ಅಭ್ಯರ್ಥಿಯು ಲಭ್ಯವಿಲ್ಲದಿದ್ದಲ್ಲಿ, ಆಗ ಕನಿಷ್ಟ ಮೂರು ವರ್ಷ ಸೇವೆ ಸಲ್ಲಿಸಿರುವ ಅಭ್ಯರ್ಥಿಯನ್ನು ಮುಂಬಡ್ತಿಗೆ ಪರಿಗಣಿಸಬಹುದು. |

| | | | | | |
|---|---|---|---|---|---|
| | | | | | **ನೇರ ನೇಮಕಾತಿಗಾಗಿ:**<br>(1) ಸಿವಿಲ್ ಇಂಜಿನಿಯರಿಂಗ್ ಅಥವಾ ಮೆಕ್ಯಾನಿಕಲ್ ಇಂಜಿನಿಯರಿಂಗ್ ನಲ್ಲಿ ಪದವಿ ಅಥವಾ ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು.<br>**ಸೇವಾ ನಿರತರಿಂದ ನೇರ ನೇಮಕಾತಿಗಾಗಿ:-**<br>(1) ಸಿವಿಲ್ ಅಥವಾ ಮೆಕ್ಯಾನಿಕಲ್ ಇಂಜಿನಿಯರಿಂಗ್ ನಲ್ಲಿ ಪದವಿ ಅಥವಾ ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾಲಯ ದಿಂದ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರ ಬೇಕು.<br>ಅಥವಾ<br>ಇಂಜಿನಿಯರ್ಸ್ ಸಂಸ್ಥೆಯಿಂದ ಅಸೋಸಿಯೇಷನ್ ಮೆಂಬರ್ ಷಿಪ್ ಎಕ್ಸಾಮಿನೇಷನ್ ಆಫ್ ಇಂಜಿನಿಯರ್ ಗಳ ಸಂಸ್ಥೆಯಿಂದ ಪಾರ್ಟ್-ಎ ಮತ್ತು ಪಾರ್ಟ್-ಬಿನಲ್ಲಿ ಉತ್ತೀರ್ಣರಾಗಿರುವದಾಗಿ ಡಿಪ್ಲೋಮೊ ಪ್ರಮಾಣ ಪತ್ರ ಹೊಂದಿರಬೇಕು. |

| | | | | | | |
|---|---|---|---|---|---|---|
| | | | | | | **ಸೂಚನೆ:** ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿ ಏನೇ ಒಳಗೊಂಡಿದ್ದರೂ, ಕನಿಷ್ಟ ಐದು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರುವ, ಮತ್ತು ಪರೀಕ್ಷಾರ್ಥ (ಪ್ರೊಬೇಷನ್) ಅವಧಿಯನ್ನು ತೃಪ್ತಿಕರವೆಂದು ಘೋಷಿಸಿರುವ ಸೇವೆಯಲ್ಲಿರುವ ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್‌ಗಳ ಗರಿಷ್ಠ ವಯೋಮಿತಿಯನ್ನು ಗಣನೆಗೆ ತೆಗೆದುಕೊಳ್ಳದೆ ಪರಿಗಣಿಸಬಹುದು. |
| 6 | ಸಹಾಯಕ ಕಾರ್ಯಪಾಲಕ ಇಂಜಿನಿಯರ್ / ತಾಂತ್ರಿಕ ಸಹಾಯಕರು – ವಿಭಾಗ- II (ರೂ. 83700-155200) | 01 | 17 | - | ಸಹಾಯಕ ಇಂಜಿನಿಯರ್ - ವಿಭಾಗ-II ವೃಂದದಿಂದ ಮುಂಬಡ್ತಿಯ ಮೂಲಕ | ಸಹಾಯಕ ಇಂಜಿನಿಯರ್- ವಿಭಾಗ-II ವೃಂದದಲ್ಲಿ ಕನಿಷ್ಟ ಐದು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರಬೇಕು;<br>ಪರಂತು, ಕನಿಷ್ಠ ಐದು ವರ್ಷ ಸೇವೆ ಸಲ್ಲಿಸಿರುವ ಅಧಿಕಾರಿಗಳು ಲಭ್ಯವಿಲ್ಲದಿದ್ದಲ್ಲಿ, ಆಗ ಮೂರು ವರ್ಷಗಳ ಸೇವೆ ಸಲ್ಲಿಸಿರುವ ಅಧಿಕಾರಿಗಳನ್ನು ಮುಂಬಡ್ತಿಗಾಗಿ ಪರಿಗಣಿಸಬಹುದು. |

| | | | | | | |
|---|---|---|---|---|---|---|
| 7 | ಲೆಕ್ಕಾಧಿಕಾರಿ<br>ರೂ. 83700-155200) | 01 | 01 | - | ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯಿಂದ ತತ್ಸಮಾನ ವೃಂದದಲ್ಲಿರುವ ಅಧಿಕಾರಿಯನ್ನು ನಿಯೋಜನೆ ಮಾಡುವ ಮೂಲಕ | |
| 8 | ಸಹಾಯಕ ಇಂಜಿನಿಯರ್ - ವಿಭಾಗ-I<br>(ರೂ. 69250-134200) | 13 | 265 | 05 | **(1) ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿರುವ ಪರೀಕ್ಷಾ ಯೋಜನೆಯ ನೇರ ನೇಮಕಾತಿಯ ಮೂಲಕ ಶೇಕಡಾ ಎಪ್ಪತ್ತು.**<br><br>**(2) ಕಿರಿಯ (ಜೂನಿಯರ್) ಇಂಜಿನಿಯರಿಂಗ್ ಯಾವುದೇ ವೃಂದದಿಂದ ಮುಂಬಡ್ತಿಯ ಮೂಲಕ ಶೇಕಡಾ ಇಪ್ಪತ್ತು.**<br><br>**(3) ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿರುವ ಪರೀಕ್ಷಾ ಯೋಜನೆಯ ಅನುಸಾರವಾಗಿ ಕರ್ನಾಟಕ ಸಣ್ಣ ನೀರಾವರಿ ಇಲಾಖೆಗೆ ಸೇರಿದ ಸಮೂಹ-ಸಿ ಯಲ್ಲಿ ಸೇವಾ ನಿರತ ಸಿಬ್ಬಂದಿಯ ಪೈಕಿ ನೇರ ನೇಮಕಾತಿ ಮೂಲಕ ಶೇಕಡಾ ಹತ್ತು;** | **ನೇರ ನೇಮಕಾತಿಗಾಗಿ:**<br>**ಇಲಾಖೆಯ ಅಗತ್ಯಕ್ಕೆ ತಕ್ಕಂತೆ** ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾಲಯ ದಿಂದ ಸಿವಿಲ್ ಇಂಜಿನಿಯರಿಂಗ್ ಅಥವಾ ಮೆಕ್ಯಾನಿಕಲ್ ಇಂಜಿನಿಯರಿಂಗ್ ನಲ್ಲಿ ಪದವಿ ಅಥವಾ ಇಂಜಿನಿಯರ್ಸ್ ಸಂಸ್ಥೆಯಿಂದ ಭಾಗ ಎ ಮತ್ತು ಬಿ ಪರೀಕ್ಷೆಯಲ್ಲಿ ಡಿಪ್ಲೊಮಾ ಉತ್ತೀರ್ಣರಾಗಿರುವುದಾಗಿ ಪ್ರಮಾಣ ಪತ್ರ ಹೊಂದಿರಬೇಕು ಅಥವಾ ಸರ್ಕಾರದಿಂದ ಇಂತಹ ಪದವಿ/ಪ್ರಮಾಣ ಪತ್ರಕ್ಕೆ ತತ್ಸಮಾನವೆಂದು ಮಾನ್ಯ ಮಾಡಲಾದ ವಿದ್ಯಾರ್ಹತೆ ಹೊಂದಿರಬೇಕು. |

| | | | | | | |
|---|---|---|---|---|---|---|
| | | | | | ಪರಂತು, ನೇರ ನೇಮಕಾತಿಗೆ ಸೇವಾ ನಿರತ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಆಗ ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿರುವ ಪರೀಕ್ಷಾ ಯೋಜನೆಯಂತೆ ನೇರ ನೇಮಕಾತಿಯ ಮೂಲಕ | **ಕಿರಿಯ ಇಂಜಿನಿಯರ್ ವೃಂದದಿಂದ ಮುಂಬಡ್ತಿ:**<br><br>1. ಸಿವಿಲ್ ಇಂಜಿನಿಯರಿಂಗ್ ಅಥವಾ ಮೆಕ್ಯಾನಿಕಲ್ ಇಂಜಿನಿಯರಿಂಗ್ ನಲ್ಲಿ ಪದವಿ ಅಥವಾ ಇಂಜಿನಿಯರ್ಸ್ ಸಂಸ್ಥೆಯಿಂದ ಭಾಗ ಎ ಮತ್ತು ಬಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದಾಗಿ ಡಿಪ್ಲೊಮಾ ಪ್ರಮಾಣ ಪತ್ರ ಹೊಂದಿರಬೇಕು ಅಥವಾ ಸರ್ಕಾರದಿಂದ ಇಂತಹ ಪದವಿ/ ಪ್ರಮಾಣ ಪತ್ರಕ್ಕೆ ತತ್ಸಮಾನವೆಂದು ಮಾನ್ಯ ಮಾಡಲಾದ ವಿದ್ಯಾರ್ಹತೆ ಹೊಂದಿರಬೇಕು.<br><br>2. ಕಿರಿಯ ಇಂಜಿನಿಯರ್ ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು.<br><br>ಪರಂತು, ಐದು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರುವ ನೌಕರರು |

| | | | | | |
|---|---|---|---|---|---|
| | | | | | ಲಭ್ಯವಿಲ್ಲದಿದ್ದಲ್ಲಿ ಮೂರು ವರ್ಷಗಳ ಸೇವೆಯನ್ನು ಸಲ್ಲಿಸಿರುವ ನೌಕರರನ್ನು ಮುಂಬಡ್ತಿಗಾಗಿ ಪರಿಗಣಿಸಬಹುದು.<br><br>**ಸೂಚನೆ:** ಸರ್ಕಾರವು ನಿಗದಿಪಡಿಸಿರುವ ಕಾಲಾವಧಿಯೊಳಗಾಗಿ ಅಂತಹ ಮುಂಬಡ್ತಿಗೆ ಮುಂಚಿತವಾಗಿ ಕಿರಿಯ ಇಂಜಿನಿಯರಿ್ಂದ ಹಿಂಪಡೆಯಲಾಗದ ಆಯ್ಕೆಯ ಪ್ರಮಾಣ ಪತ್ರವನ್ನು ಪಡೆದುಕೊಳ್ಳತಕ್ಕದ್ದು.<br><br>**ಸೇವಾ ನಿರತರಿಂದ ನೇರ ನೇಮಕಾತಿ:**<br><br>(1) ಸಿವಿಲ್ ಇಂಜನಿಯರಿಂಗ್ ಅಥವಾ ಮೆಕ್ಯಾನಿಕಲ್ ಇಂಜನಿಯರಿಂಗ್‌ನಲ್ಲಿ ಪದವಿ ಪಡೆದವರಾಗಿರತಕ್ಕದ್ದು ಅಥವಾ ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. ಅಥವಾ ಇಂಜಿನಿಯರ್ಸ್ ಸಂಸ್ಥೆಯಿಂದ ಭಾಗ ಎ ಮತ್ತು ಬಿ ಪರೀಕ್ಷೆಯ |

| | | | | | | |
|---|---|---|---|---|---|---|
| | | | | | | ಡಿಪ್ಲೊಮಾ ಪ್ರಮಾಣ ಪತ್ರ ಹೊಂದಿರಬೇಕು ಅಥವಾ ಸರ್ಕಾರದಿಂದ ಇಂತಹ ಪದವೀ ಪ್ರಮಾಣ ಪತ್ರಕ್ಕೆ ತತ್ಸಮಾನವೆಂದು ಮಾನ್ಯ ಮಾಡಲಾದ ವಿದ್ಯಾರ್ಹತೆಯನ್ನು ಹೊಂದಿರಬೇಕು.<br><br>(2) ಗ್ರೂಪ್ "ಸಿ" ವೃಂದದ ನೌಕರರು (ಕಿರಿಯ ಇಂಜಿನಿಯರ್ ಹೊರತುಪಡಿಸಿ) ಐದು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು.<br><br>**ಸೂಚನೆ**: ನೇರ ನೇಮಕಾತಿಗೆ ಕಿರಿಯ ಇಂಜಿನಿಯರ್ ಮತ್ತು ಗ್ರೂಪ್-ಸಿ ನೌಕರರಿಂದ ಮುಂಚಿತವಾಗಿ ಹಿಂಪಡೆಯಲಾಗದ ಆಯ್ಕೆಯ ಪ್ರಮಾಣ ಪತ್ರವನ್ನು (Irrevocable option) ಪಡೆದುಕೊಳ್ಳತಕ್ಕದ್ದು. |
| 9 | ಸಹಾಯಕ ಇಂಜಿನಿಯರ್ - ವಿಭಾಗ-II<br>(ರೂ. 69250-134200) | 03 | 66 | - | ಕಿರಿಯ ಇಂಜಿನಿಯರ್ ವೃಂದದಿಂದ ಮುಂಬಡ್ತಿಯ ಮೂಲಕ | ಕಿರಿಯ ಇಂಜಿನಿಯರ್ ವೃಂದದಲ್ಲಿ ಐದು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರಬೇಕು; |

| | | | | | | |
|---|---|---|---|---|---|---|
| | | | | | | ಪರಂತು, ಐದು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ನೌಕರರು ಲಭ್ಯವಿಲ್ಲದಿದ್ದಲ್ಲಿ ಆಗ ಮೂರು ವರ್ಷಗಳ ಸೇವೆ ಸಲ್ಲಿಸಿರುವ ನೌಕರರನ್ನು ಮುಂಬಡ್ತಿಗಾಗಿ ಪರಿಗಣಿಸಬಹುದು. |
| 10 | ಸಹಾಯಕ ಆಡಳಿತಾಧಿಕಾರಿ (ರೂ.65950-124900) | 01 | 04 | - | ಅಧೀಕ್ಷಕ ವೃಂದದಿಂದ ಮುಂಬಡ್ತಿಯ ಮೂಲಕ | ಅಧೀಕ್ಷಕ ವೃಂದದಲ್ಲಿ ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರಬೇಕು.<br>ಪರಂತು, ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ಅಧಿಕಾರಿಗಳು ಲಭ್ಯವಿಲ್ಲದಿದ್ದಲ್ಲಿ ಆಗ ಮೂರು ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ಅಧಿಕಾರಿಗಳನ್ನು ಬಡ್ತಿಗಾಗಿ ಪರಿಗಣಿಸಬಹುದು. |
| 11 | ಲೆಕ್ಕ ಪತ್ರ ಅಧೀಕ್ಷಕ (ಕರ್ನಾಟಕ ರಾಜ್ಯ ಲೆಕ್ಕಪತ್ರ ಇಲಾಖೆ) (ರೂ.65950-124900) | **01** | **08** | - | ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯಿಂದ ತತ್ಸಮಾನ ವೃಂದದ ಅಧಿಕಾರಿಯ ನಿಯೋಜನೆಯ ಮೂಲಕ | - |

| | | | | | | |
|---|---|---|---|---|---|---|
| 12 | ಲೆಕ್ಕ ಪತ್ರ ಅಧೀಕ್ಷಕ (ಸಣ್ಣ ನೀರಾವರಿ ಇಲಾಖೆ)<br>(ರೂ. 61300-112900) | 00 | **10** | - | (1) ಅನುಕ್ರಮವಾಗಿ 5:2:2ರ ಅನುಪಾತದಲ್ಲಿ ಪ್ರಥಮ ದರ್ಜೆ ಸಹಾಯಕ/ ಶೀಘ್ರಲಿಪಿಗಾರ/ ಪ್ರಥಮ ದರ್ಜೆ ಲೆಕ್ಕ ಸಹಾಯಕರ ವೃಂದದಿಂದ ಶೇಕಡಾ ತೊಂಬತ್ತು; ಮತ್ತು<br>(2) ಅಧೀಕ್ಷಕರ ವೃಂದದಿಂದ ವರ್ಗಾವಣೆಯ ಮೂಲಕ; ಶೇಕಡಾ ಹತ್ತು<br>**ಟಿಪ್ಪಣಿ:** ಪ್ರಥಮ ದರ್ಜೆ ಸಹಾಯಕ, ಶೀಘ್ರಲಿಪಿಗಾರ, ಪ್ರಥಮ ದರ್ಜೆ ಲೆಕ್ಕ ಸಹಾಯಕರ ಮುಂಬಡ್ತಿಗೆ ಪರಿಗಣಿಸುವ ಮುನ್ನ ಹಿಂಪಡೆಯಲಾಗದ ಆಯ್ಕೆಯನ್ನು ಚಲಾಯಿಸತಕ್ಕದ್ದು. | **ಮುಂಬಡ್ತಿಗಾಗಿ.-**<br>(1) ಪ್ರಥಮ ದರ್ಜೆ ಸಹಾಯಕ, ಶೀಘ್ರಲಿಪಿಗಾರ, ಪ್ರಥಮ ದರ್ಜೆ ಲೆಕ್ಕ ಸಹಾಯಕರು ವೃಂದದಲ್ಲಿ ಕನಿಷ್ಠ ಐದು ವರ್ಷಗಳಿಗೆ ಅವಧಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರಬೇಕು;<br>ಎಸ್ ಎ ಎಸ್ ಭಾಗ-1, 2 ಮತ್ತು 3 ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು; |
| 13 | ಅಧೀಕ್ಷಕರು<br>(ರೂ. 61300-112900) | 03 | 22 | - | ಪ್ರಥಮ ದರ್ಜೆ ಸಹಾಯಕ ವೃಂದದಿಂದ ಮತ್ತು ಶೀಘ್ರಲಿಪಿಗಾರರ ವೃಂದದಿಂದ ಅನುಕ್ರಮವಾಗಿ 8:1 ರ ಅನುಪಾತದಲ್ಲಿ. ಪ್ರತಿ 9 ನೇ ಖಾಲಿ ಹುದ್ದೆಯು, ಶೀಘ್ರಲಿಪಿಗಾರ ವೃಂದದಿಂದ ಮುಂಬಡ್ತಿಯ ಮೂಲಕ ಭರ್ತಿಯಾಗತಕ್ಕದ್ದು; | ಪ್ರಥಮ ದರ್ಜೆ ಸಹಾಯಕ / ಶೀಘ್ರಲಿಪಿಗಾರ ವೃಂದದಲ್ಲಿ ಕನಿಷ್ಠ ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರಬೇಕು;<br>ಪರಂತು, ಐದು ವರ್ಷಗಳ ಅವಧಿಗೆ ಕಡಿಮೆ ಇಲ್ಲದ ಸೇವೆ ಸಲ್ಲಿಸಿರುವ ನೌಕರರು ಲಭ್ಯವಿಲ್ಲದ ಪಕ್ಷದಲ್ಲಿ, ಮೂರು ವರ್ಷಗಳ ಅವಧಿಗೆ ಕಡಿಮೆಯಿಲ್ಲದಂತೆ ಸೇವೆ |

| | | | | | | |
|---|---|---|---|---|---|---|
| | | | | | **ಸೂಚನೆ:** ಶೀಘ್ರಲಿಪಿಗಾರರು ಜ್ಯೇಷ್ಠತೆ ಕಂ ಮೆರಿಟ್ ಆಧಾರದ ಮೇಲೆ ಪ್ರಥಮ ದರ್ಜೆ ಸಹಾಯಕ ವೃಂದದಲ್ಲಿ ಒಂದು ವರ್ಷಕ್ಕಿಂತ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರಬೇಕು. | ಸಲ್ಲಿಸಿರುವ ನೌಕರರನ್ನು ಮುಂಬಡ್ತಿಗೆ ಪರಿಗಣಿಸಬಹುದು |
| 14 | ಕಿರಿಯ ಇಂಜಿನಿಯರ್ (ರೂ.54175-99400) | 00 | 195 | - | (1) ಶೇಕಡಾ 80 ರಷ್ಟು ಕರ್ನಾಟಕ ನಾಗರೀಕ ಸೇವೆಗಳು (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021ರ ಅನುಗುಣವಾಗಿ ನೇರ ನೇಮಕಾತಿಯ ಮೂಲಕ; ಮತ್ತು<br>(2) ಕರ್ನಾಟಕ ನಾಗರೀಕ ಸೇವೆ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021ರ ಅನುಗುಣವಾಗಿ ಸಣ್ಣ ನೀರಾವರಿ ಇಲಾಖೆಗೆ ಸೇರಿದ ಸಮೂಹ – ಸಿ ವೃಂದದ ಸೇವಾ ನಿರತ ನೌಕರರ ಪೈಕಿ ನೇರ ನೇಮಕಾತಿಯ ಮೂಲಕ ಶೇಕಡಾ ಇಪ್ಪತ್ತು. | **ನೇರ ನೇಮಕಾತಿಗಾಗಿ:**<br>ಕರ್ನಾಟಕದಲ್ಲಿ ಮಾನ್ಯತೆ ಪಡೆದ ಪಾಲಿಟೆಕ್ನಿಕ್ ವಿದ್ಯಾ ಸಂಸ್ಥೆಯಿಂದ ಸಿವಿಲ್ ಅಥವಾ ಮೆಕ್ಯಾನಿಕಲ್ ಡಿಪ್ಲೋಮಾ ವಿದ್ಯಾರ್ಹತೆ ಪಡೆದವನಾಗಿರಬೇಕು; ಅಥವಾ ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾಲಯ / ಸಂಸ್ಥೆಯಿಂದ ತತ್ಸಮಾನ ವಿದ್ಯಾರ್ಹತೆ ಹೊಂದಿದವರಾಗಿರಬೇಕು.<br>**ಸೇವಾ ನಿರತ ನೇರ ನೇಮಕಾತಿಗಾಗಿ:**<br>**(1)** ನೇರ ನೇಮಕಾತಿಗೆ ನಿರ್ದಿಷ್ಟಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರಬೇಕು; ಮತ್ತು |

| | | | | | | |
|---|---|---|---|---|---|---|
| | | | | | | (2) ಗ್ರೂಪ್ ಸಿ ವೃಂದದಲ್ಲಿ ಕನಿಷ್ಠ ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರಬೇಕು;<br><br>ಪರಂತು, ಕನಿಷ್ಠ ಐದು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರುವವರು ಲಭ್ಯವಿಲ್ಲದಿದ್ದಲ್ಲಿ ಕನಿಷ್ಟ ಮೂರು ವರ್ಷಗಳಿಗೆ ಅವಧಿ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದವರನ್ನು ಮುಂಬಡ್ತಿಗಾಗಿ ಪರಿಗಣಿಸಬಹುದು;<br><br>ಪರಂತು, ಐದು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರುವ ನೌಕರರು ಲಭ್ಯವಿಲ್ಲ ದ್ದಲ್ಲಿ ಆಗ ಮೂರು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರುವ ನೌಕರರನ್ನು ಸೇವಾನಿರತ ನೇರ ನೇಮಕಾತಿಗಾಗಿ ಪರಿಗಣಿಸಬಹುದು.<br><br>**ಟಿಪ್ಪಣಿ:** ಕನಿಷ್ಠ ಐದು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರುವವರು ಲಭ್ಯವಿಲ್ಲದಿದ್ದಲ್ಲಿ ಕನಿಷ್ಟ ಮೂರು ವರ್ಷಗಳ ಅವಧಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರುವ ಸಮೂಹ-ಸಿ ವೃಂದದ ನೌಕರರ |

| | | | | | | |
|---|---|---|---|---|---|---|
| | | | | | | ಪರೀಕ್ಷಾರ್ಥ (ಪ್ರೊಬೇಷನ್) ಅವಧಿಯನ್ನು ತೃಪ್ತಿಕರವೆಂದು ಘೋಷಿಸಿದ್ದಲ್ಲಿ, ಗರಿಷ್ಠ ವಯೋಮಿತಿಯನ್ನು ಗಣನೆಗೆ ತೆಗೆದುಕೊಳ್ಳದೆ ಪರಿಗಣಿಸ ಬಹುದು. |
| 15 | ಸಹಾಯಕ ಸಾಂಖ್ಯಿಕ ಅಧಿಕಾರಿ (ರೂ. 54175-99400)) | 0 | 6 | - | ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ತತ್ಸಮಾನ ವೃಂದದಲ್ಲಿನ ಅಧಿಕಾರಿಯ ನಿಯೋಜನೆಯ ಮೂಲಕ | - |
| 16 | ಸಾಂಖ್ಯಿಕ ನಿರೀಕ್ಷಕರು (ರೂ.44425-83700) | 0 | 7 | - | ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ತತ್ಸಮಾನ ವೃಂದದಲ್ಲಿರುವ ಸಿಬ್ಬಂದಿಯ ನಿಯೋಜನೆಯ ಮೂಲಕ | - |
| 17 | ಡ್ರಾಫ್ಟ್ ಮನ್ (ರೂ. 44425-83700)) | 0 | 8 | - | ಪ್ರಸ್ತುತ ಸೇವೆಯಲ್ಲಿರುವ ವ್ಯಕ್ತಿಯ ನಿವೃತ್ತಿ ಅಥವಾ ಇತರ ಯಾವುದೇ ವೃಂದಕ್ಕೆ ವರ್ಗಾವಣೆಯಾದರೆ ಅಥವಾ ಉನ್ನತ ವೃಂದಕ್ಕೆ ಮುಂಬಡ್ತಿ ಹೊಂದಿದರೆ ಅನ್ಯತಾ ಕಾರಣದಿಂದ ಖಾಲಿ ಹುದ್ದೆ ಖಾಲಿಯಾದ ಕೂಡಲೇ ಈ ಹುದ್ದೆಯು ರದ್ದಾಗತಕ್ಕದ್ದು, | - |

| | | | | | | |
|---|---|---|---|---|---|---|
| 18 | ಪ್ರಥಮ ದರ್ಜೆ ಸಹಾಯಕ (ರೂ. 44425-83700)) | 10 | 105 | - | 1. ಕರ್ನಾಟಕ ಸಿವಿಲ್ ಸೇವೆಗಳು (ಲಿಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1978 ರ ಅನುಗುಣವಾಗಿ ನೇರ ನೇಮಕಾತಿ ಮೂಲಕ ಶೇಕಡಾ ಐವತ್ತು ಮತ್ತು;<br>2. ದ್ವಿತೀಯ ದರ್ಜೆ ಸಹಾಯಕ ವೃಂದದಿಂದ ಮುಂಬಡ್ತಿಯ ಮೂಲಕ; ಶೇಕಡಾ ಐವತ್ತು.<br>**ಟಿಪ್ಪಣಿ:** ಶೀಘ್ರಲಿಪಿಗಾರರನ್ನು ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ ಒಂದು ವರ್ಷಕ್ಕೆ ಕಡಿಮೆ ಇಲ್ಲದಂತೆ ಜ್ಯೇಷ್ಠತೆ ಮತ್ತು ಅರ್ಹತೆಯ ಆಧಾರದಲ್ಲಿ ನೇಮಿಸತಕ್ಕದ್ದು; | **ನೇರ ನೇಮಕಾತಿಗಾಗಿ:**<br>ಕರ್ನಾಟಕ ಸಿವಿಲ್ ಸೇವೆಗಳು (ಲಿಪಿಕ ಹುದ್ದೆಗಳಿಗೆ ನೇರ ನೇಮಕಾತಿ) ನಿಯಮಗಳು, 1978 ರಲ್ಲಿ ನಿರ್ದಿಷ್ಟಪಡಿಸಿರುವ ವಿದ್ಯಾರ್ಹತೆ<br>**ಮುಂಬಡ್ತಿಗಾಗಿ:**<br>ದ್ವಿತೀಯ ದರ್ಜೆ ಸಹಾಯಕ ಹುದ್ದೆಯಲ್ಲಿ ಕನಿಷ್ಠ ಐದು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರಬೇಕು; |
| 19 | ಪ್ರಥಮ ದರ್ಜೆ ಲೆಕ್ಕ ಸಹಾಯಕ (ರೂ. 44425-83700)) | 1 | 39 | - | (1) ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರಗಳ ಇಲಾಖೆಯಿಂದ ತತ್ಸಮಾನ ವೃಂದದ ನೌಕರರ ನಿಯೋಜನೆಯ ಮೂಲಕ; ಶೇಕಡಾ ಐವತ್ತು.<br>(2) ಪ್ರಥಮ ದರ್ಜೆ ಲೆಕ್ಕಗಳ ಸಹಾಯಕರಾಗಿ ಕಾರ್ಯನಿರ್ವಹಿಸಿ | **ವರ್ಗಾವಣೆಗಾಗಿ :**<br>(1) ಎಸ್.ಎ.ಎಸ್ ಇಲಾಖಾ ಪರೀಕ್ಷೆ ಅಥವಾ ಲೋಕಲ್ ಲಾಸ್ ಕಮರ್ಷಿಯಲ್ ಬುಕ್ ಕೀಪಿಂಗ್ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.<br>(2) ಪ್ರಥಮ ದರ್ಜೆ ಸಹಾಯಕ ವೃಂದದಲ್ಲಿ ಕನಿಷ್ಠ ಎರಡು ವರ್ಷಗಳಿಗೆ ಕಡಿಮೆಯಿಲ್ಲದೆ ಸೇವೆ ಸಲ್ಲಿಸಿರಬೇಕು; |

| | | | | | | |
|---|---|---|---|---|---|---|
| | | | | | ಹಿಂಪಡೆಯಲಾಗದ ಆಯ್ಕೆಯನ್ನು ಚಲಾಯಿಸುವುದರ ಮೂಲಕ ಮತ್ತು ಅವರ ಜೇಷ್ಠತೆ ಮತ್ತು ಇಚ್ಛೆಯ ಆಧಾರದ ಮೇಲೆ ಪ್ರಥಮ ದರ್ಜೆ ಸಹಾಯಕ ವೃಂದದಿಂದ ವರ್ಗಾವಣೆ ಮೂಲಕ ಶೇಕಡಾ ಇಪ್ಪತ್ತು; ಮತ್ತು<br>(3) ಸಂಯೋಜಿತ ಜ್ಯೇಷ್ಠತೆಯ ಆಧಾರದ ಮೇಲೆ ದ್ವಿತೀಯ ದರ್ಜೆ ಸಹಾಯಕ ಮತ್ತು ದ್ವತೀಯ ದರ್ಜೆ ಲೆಕ್ಕಗಳ ಸಹಾಯಕ ವೃಂದದಿಂದ ಮುಂಬಡ್ತಿ ಮೂಲಕ ಶೇಕಡಾ ಮೂವತ್ತು.<br><br>**ಟಿಪ್ಪಣಿ: 1** ದ್ವಿತೀಯ ದರ್ಜೆ ಸಹಾಯಕರು ವರ್ಗಾವಣೆಯ ಸಮಯದಲ್ಲಿ ಹಿಂಪಡೆಯಲಾಗದ ಆಯ್ಕೆಯನ್ನು ಚಲಾಯಿಸತಕ್ಕದ್ದು. | **ಮುಂಬಡ್ತಿಗಾಗಿ:**<br><br>1. ದ್ವೀತೀಯ ದರ್ಜೆ ಸಹಾಯಕ / ದ್ವೀತೀಯ ದರ್ಜೆ ಲೆಕ್ಕ ಸಹಾಯಕರ ವೃಂದದಲ್ಲಿ ಕನಿಷ್ಠ 3 ವರ್ಷಗಳ ಅವಧಿಗೆ ಕಡಿಮೆ ಇಲ್ಲದ ಸೇವೆ ಸಲ್ಲಿಸಿರಬೇಕು; ಮತ್ತು<br><br>**2)** ಎಸ್.ಎ.ಎಸ್ ಪರೀಕ್ಷೆ ಅಥವಾ ಲೋಕಲ್ ಲಾಸ್ ಕಮರ್ಷಿಯಲ್ ಬುಕ್ ಕೀಪಿಂಗ್ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು |
| 20 | ಶೀಘ್ರಲಿಪಿಗಾರರು (ಕನ್ನಡ / ಆಂಗ್ಲ ಭಾಷೆ) (ರೂ44425-83700)) | 3 | 21 | - | (1) ಕರ್ನಾಟಕ ಸಿವಿಲ್ ಸೇವೆಗಳು (ಶೀಘ್ರಲಿಪಿಗಾರರು ಮತ್ತು ದತ್ತಾಂಶ ನಮೂದು ಸಹಾಯಕರ ನೇಮಕಾತಿ) ನಿಯಮಗಳು, 1983 | **ನೇರ ನೇಮಕಾತಿಗಾಗಿ;**<br><br>1. ಕರ್ನಾಟಕ ಸಿವಿಲ್ ಸೇವೆಗಳು (ಶೀಘ್ರಲಿಪಿಗಾರರು ಮತ್ತು ದತ್ತಾಂಶ ನಮೂದು ಸಹಾಯಕರ |

| | | | | | | |
|---|---|---|---|---|---|---|
| | | | | | ರ ಅನುಗುಣವಾಗಿ ನೇಮಕಾತಿ ಮೂಲಕ; ಶೇಕಡಾ ಐವತ್ತು; ಮತ್ತು<br>(2) ದತ್ತಾಂಶ ನಮೂದು ಸಹಾಯಕರ ವೃಂದದಿಂದ ಮುಂಬಡ್ತಿಯ ಮೂಲಕ; ಶೇಕಡಾ ಐವತ್ತು.<br>**ಟಿಪ್ಪಣಿ:** ಕರ್ನಾಟಕ ಸಿವಿಲ್ ಸೇವೆಗಳು (ಶೀಘ್ರಲಿಪಿಗಾರರು ಮತ್ತು ದತ್ತಾಂಶ ನಮೂದು ಸಹಾಯಕರ ನೇಮಕಾತಿ) ನಿಯಮಗಳು, 1983 ರಲ್ಲಿ ಏನೇ ಒಳಗೊಂಡಿದ್ದರೂ ಆಂಗ್ಲಭಾಷೆ ಶೀಘ್ರಲಿಪಿಗಾರರ ನೇಮಕಾತಿಗೆ ಇದರಿಂದ ವಿನಾಯಿತಿ ಪಡೆಯತಕ್ಕದ್ದು. | ಹುದ್ದೆಗಳಿಗೆ ನೇಮಕಾತಿ) ನಿಯಮಗಳು , 1983 ರಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆ ಹೊಂದಿರತಕ್ಕದ್ದು,<br>**2. ಮುಂಬಡ್ತಿಗಾಗಿ:** (1) ಕರ್ನಾಟಕ ಸಿವಿಲ್ ಸೇವೆಗಳು (ಶೀಘ್ರಲಿಪಿಗಾರರು ಮತ್ತು ದತ್ತಾಂಶ ನಮೂದು ಸಹಾಯಕರ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1983 ರಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆ ಹೊಂದಿರತಕ್ಕದ್ದು.<br>(2) ದತ್ತಾಂಶ ನಮೂದು ಸಹಾಯಕರ ವೃಂದದಲ್ಲಿ ಕನಿಷ್ಠ ಮೂರು ವರ್ಷಗಳಿಗೆ ಕಡಿಮೆಯಿಲ್ಲದಂತೆ ಅವಧಿಗೆ ಸೇವೆ ಸಲ್ಲಿಸಿರಬೇಕು; |
| 21 | ಹಿರಿಯ ದತ್ತಾಂಶ ನಮೂದು ಸಹಾಯಕರು (ರೂ. 44425-83700)) | ದತ್ತಾಂಶ ನಮೂದು ಸಹಾಯಕರ ವೃಂದದಿಂದ 20% | | | ದತ್ತಾಂಶ ನಮೂದು ಸಹಾಯಕರ ವೃಂದದಿಂದ ಮುಂಬಡ್ತಿಯ ಮೂಲಕ | ದತ್ತಾಂಶ ನಮೂದು ಸಹಾಯಕರ ವೃಂದದಲ್ಲಿ ಕನಿಷ್ಠ ಹತ್ತು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರಬೇಕು. |

| | | | | | | |
|---|---|---|---|---|---|---|
| 22 | ಪ್ರಥಮ ದರ್ಜೆ ಉಗ್ರಾಣ ಪಾಲಕರು (ರೂ.44425-83700) | 00 | 01 | - | ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ವ್ಯಕ್ತಿಯು ಸೇವೆಯಿಂದ ನಿವೃತ್ತಿಯಾದ ಅಥವಾ ಯಾವುದೇ ವೃಂದಕ್ಕೆ ವರ್ಗಾವಣೆಯಾದರೆ ಅಥವಾ ಉನ್ನತ ವೃಂದಕ್ಕೆ ಮುಂಬಡ್ತಿ ಹೊಂದಿದ ಕೂಡಲೇ ಈ ಹುದ್ದೆಗಳು ರದ್ದಾಗತಕ್ಕದ್ದು. | |
| 23 | ಪ್ರಥಮ ದರ್ಜೆ ಭೂಮಾಪಕರು (ರೂ. .44425-83700)) | 00 | 51 | - | ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯಲ್ಲಿನ ತತ್ಸಮಾನ ವೃಂದದ ನೌಕರರ ನಿಯೋಜನೆಯ ಮೂಲಕ | |
| 24 | ಅನುರೇಖಕರು (ಟ್ರೇಸರ್) (ರೂ. 37500-76100) | 00 | 12 | - | ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ವ್ಯಕ್ತಿಯು ಸೇವೆಯಿಂದ ನಿವೃತ್ತಿಯಾದ ಅಥವಾ ಯಾವುದೇ ವೃಂದಕ್ಕೆ ವರ್ಗಾವಣೆಯಾದರೆ ಅಥವಾ ಉನ್ನತ ವೃಂದಕ್ಕೆ ಮುಂಬಡ್ತಿ ಹೊಂದಿದ ಕೂಡಲೇ ಈ ಹುದ್ದೆಗಳು ರದ್ದಾಗತಕ್ಕದ್ದು . | |
| 25 | ನೀಲಿ ನಕ್ಷೆಕಾರರು (ಬ್ಲೂ ಪ್ರಿಂಟರ್) (ರೂ. 34100-67600) | 0 | 3 | - | ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ವ್ಯಕ್ತಿಯು ಸೇವೆಯಿಂದ ನಿವೃತ್ತಿಯಾದ ಅಥವಾ ಯಾವುದೇ ವೃಂದಕ್ಕೆ | |

| | | | | | | |
|---|---|---|---|---|---|---|
| | | | | | ವರ್ಗಾವಣೆಯಾದರೆ ಅಥವಾ ಉನ್ನತ ವೃಂದಕ್ಕೆ ಮುಂಬಡ್ತಿ ಹೊಂದಿದ ಕೂಡಲೇ ಈ ಹುದ್ದೆಗಳು ರದ್ದಾಗತಕ್ಕದ್ದು . | |
| 26 | ದ್ವಿತೀಯ ದರ್ಜೆ ಸಹಾಯಕರು<br>(ರೂ. 34100-67600) | 10 | 180 | - | (1) ಕರ್ನಾಟಕ ರಾಜ್ಯ ಸೇವೆ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು, 1978ರ ಅನುಗುಣವಾಗಿ ನೇರ ನೇಮಕಾತಿ ಮೂಲಕ ಶೇಕಡಾ ಅರವತ್ತೇಳು ಮತ್ತು;<br>(2) ವಾಹನ ಚಾಲಕರ ವೃಂದದಿಂದ ವರ್ಗಾವಣೆಯ ಮೂಲಕ ಶೇಕಡಾ ಮೂವತ್ತ್ಮೂರು.<br>(1) ಪರಂತು, ಅರ್ಹ ವಾಹನ ಚಾಲಕನು ಲಭ್ಯವಿಲ್ಲದಿದ್ದಲ್ಲಿ ಆಗ ಸಂಯೋಜಿತ ಜ್ಯೇಷ್ಠತೆಯ ಆಧಾರದ ಮೇಲೆ ಪ್ರವರ್ಗ-ಡಿ ವೃಂದದ ಸಿಬ್ಬಂದಿಯ ಮುಂಬಡ್ತಿಯ ಮೂಲಕ. | **ನೇರ ನೇಮಕಾತಿಗಾಗಿ:**<br>ಕರ್ನಾಟಕ ಸಿವಿಲ್ ಸೇವೆ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು, 1978 ರಲ್ಲಿ ನಿಗದಿಪಡಿಸಿರುವಂತೆ;<br>**ವರ್ಗಾವಣೆಗಾಗಿ:**<br>ಕರ್ನಾಟಕ ಸಿವಿಲ್ ಸೇವೆ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು, 1978ರ ಅನುಗುಣವಾಗಿ;<br>**ಮುಂಬಡ್ತಿಗಾಗಿ:**<br>ಕರ್ನಾಟಕ ಸಿವಿಲ್ ಸೇವೆ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು, 1978ರ ಅನುಗುಣವಾಗಿ; |
| 27 | ದ್ವಿತೀಯ ದರ್ಜೆ ಲೆಕ್ಕ ಸಹಾಯಕ<br>(ರೂ.34100-67600) | 00 | 47 | - | (1) ಕರ್ನಾಟಕ ಲೆಕ್ಕ ಪರಿಶೋಧನೆ ಮತ್ತು ರಾಜ್ಯ ಲೆಕ್ಕಪತ್ರಗಳ ಇಲಾಖೆಯಲ್ಲಿನ ತತ್ಸಮಾನ ವೃಂದದಲ್ಲಿನ ನೌಕರರ ನಿಯೋಜನೆಯ ಮೂಲಕ | **ವರ್ಗಾವಣೆಗಾಗಿ:**<br>ದ್ವಿತೀಯ ದರ್ಜೆ ಸಹಾಯಕರ ವೃಂದದಲ್ಲಿ ಕನಿಷ್ಠ ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ |

| | | | | | | |
|---|---|---|---|---|---|---|
| | | | | | ಶೇಕಡಾ ಐವತ್ತು.<br>(2) ಅವರ ಜ್ಯೇಷ್ಠತೆ ಮತ್ತು ಇಚ್ಛೆಯ ಆಧಾರದ ಮೇಲೆ ಸಣ್ಣ ನೀರಾವರಿ ಇಲಾಖೆಯ ದ್ವಿತಿಯ ದರ್ಜೆ ಸಹಾಯಕ ವೃಂದದಿಂದ ವರ್ಗಾವಣೆಯ ಮೂಲಕ ಶೇಕಡಾ ಐವತ್ತು. ಮತ್ತು; ದ್ವಿತೀಯ ದರ್ಜೆ ಮತ್ತು ಲೆಕ್ಕಗಳ ಸಹಾಯಕ ರಾಗಿ ಕಾರ್ಯ ನಿರ್ವಹಿಸಿದ ನಂತರ ಹಿಂಪಡೆಯಲಾಗದ ಆಯ್ಕೆಯನ್ನು ಚಲಾಯಿಸತಕ್ಕದ್ದು.<br>ಪರಂತು ದ್ವಿತೀಯ ದರ್ಜೆ ಸಹಾಯಕ ವೃಂದದಲ್ಲಿ ಮೂರು ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ ನೌಕರರು ಲಭ್ಯವಿಲ್ಲದಿದ್ದಲ್ಲಿ ಆಗ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರಗಳ ಇಲಾಖೆಯಿಂದ ತತ್ಸಮಾನ ವೃಂದದಲ್ಲಿರುವ ನೌಕರನ ನಿಯೋಜನೆಯ ಮೂಲಕ; | ಸೇವೆ ಸಲ್ಲಿಸಿರಬೇಕು;<br>ಪರಂತು, ಐದು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿದ ನೌಕರರು ಲಭ್ಯವಿಲ್ಲದಿದ್ದಲ್ಲಿ ಕನಿಷ್ಠ ಮೂರು ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ ನೌಕರರನ್ನು ವರ್ಗಾವಣೆಗಾಗಿ ಪರಿಗಣಿಸಬಹುದು;<br>ಐದು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿದ ನೌಕರರು ಲಭ್ಯವಿಲ್ಲದಿದ್ದಲ್ಲಿ ಆಗ ಮೂರು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರುವ ನೌಕರರನ್ನು ವರ್ಗಾವಣೆಗಾಗಿ ಪರಿಗಣಿಸಬಹುದು. |

| | | | | | | |
|---|---|---|---|---|---|---|
| 28 | ದತ್ತಾಂಶ ನಮೂದು ಸಹಾಯಕರು<br>(ರೂ. 34100-67600) | 08 | 124 | - | ಕರ್ನಾಟಕ ಸಿವಿಲ್ ಸೇವೆಗಳು (ಶೀಘ್ರಲಿಪಿಗಾರರು ಮತ್ತು ದತ್ತಾಂಶ ನಮೂದು ಸಹಾಯಕರ ನೇಮಕಾತಿ) ನಿಯಮಗಳು, 1983ರ ಅನುಗುಣವಾಗಿ ನೇರ ನೇಮಕಾತಿಯ ಮೂಲಕ;<br>( ಸೂಚನೆ:ಈ ಹುದ್ದೆಯ ವೃಂದ ಬಲವು ಹಿರಿಯ ದತ್ತಾಂಶ ನಮೂದಕರ ಮುಂಬಡ್ತಿಯನ್ನು ಅವಲಂಬಿಸಿರುತ್ತದೆ) | ಕರ್ನಾಟಕ ಸಿವಿಲ್ ಸೇವೆಗಳು (ಶೀಘ್ರಲಿಪಿಗಾರರು ಮತ್ತು ದತ್ತಾಂಶ ನಮೂದು ಸಹಾಯಕರ ನೇಮಕಾತಿ) ನಿಯಮಗಳು, 1983ರ ಅನುಗುಣವಾಗಿ ನಿಗದಿಪಡಿಸಿರುವಂತೆ; |
| 29 | ದ್ವಿತೀಯ ದರ್ಜೆ ಭೂಮಾಪಕ<br>(ರೂ. 34100-67600) | 00 | 01 | - | ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯಲ್ಲಿನ ತತ್ಸಮಾನ ವೃಂದದ ನೌಕರರ ನಿಯೋಜನೆಯ ಮೂಲಕ; | |
| 30 | ವಾಹನ ಚಾಲಕ / ಡಿ ಆರ್ ಆರ್ ಚಾಲಕ<br>(ರೂ. 34100-67600 | 01 | 78 | - | ಸಂಯೋಜಿತ ಜ್ಯೇಷ್ಠತೆ ಆಧಾರದ ಮೇಲೆ ಸಮೂಹ-ಡಿ ಸೇವೆ ಯಲ್ಲಿನ ವೃಂದದಿಂದ ಮುಂಬಡ್ತಿಯ ಮೂಲಕ:<br>ಪರಂತು, ಮುಂಬಡ್ತಿಗೆ ಅರ್ಹ ನೌಕರನು ಲಭ್ಯ ವಿಲ್ಲದಿದ್ದಲ್ಲಿ, ಕರ್ನಾಟಕ ನಾಗರಿಕ ಸೇವೆಗಳು (ನೇರ ನೇಮಕಾತಿ) ಸಾಮಾನ್ಯ ನಿಯಮಗಳು 2021ರ | **ಮುಂಬಡ್ತಿಗಾಗಿ:**<br>(1) ಕನ್ನಡ ಭಾಷೆಯೊಂದಿಗೆ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು;<br>(2) ಪ್ರಥಮ ಚಿಕಿತ್ಸೆ ಪ್ರಮಾಣ ಪತ್ರವನ್ನು ಹೊಂದಿರಬೇಕು ಸಂಬಂಧಪಟ್ಟ ಪ್ರಾಧಿಕಾರ ದಿಂದಭಾರಿ / ಲಘು ವಾಹನ |

| | | | | | | |
|---|---|---|---|---|---|---|
| | | | | | ಅನುಗುಣವಾಗಿ ನೇರ ನೇಮಕಾತಿಯ ಮೂಲಕ; | ಚಾಲನ ಪರವಾನಗಿ ಪತ್ರವನ್ನು ಹೊಂದಿರಬೇಕು ಮತ್ತು<br>(3) ಪ್ರವರ್ಗ-ಡಿ ವೃಂದದಲ್ಲಿ ಐದು ವರ್ಷಗಳ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರಬೇಕು;<br>ಪರಂತು, ಕನಿಷ್ಠ ಐದು ವರ್ಷಗಳಿಗೆ ಕಡಿಮೆಯಿಲ್ಲ ದಂತೆ ಸೇವೆ ಸಲ್ಲಿಸಿರುವ ಅರ್ಹ ಸಿಬ್ಬಂದಿಯು ಲಭ್ಯ ವಿಲ್ಲದಿದ್ದಲ್ಲಿ ಮೂರು ವರ್ಷ ಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ನೌಕರನ ಪರಿಗಣಿಸಬಹುದು;<br>**ನೇರ ನೇಮಕಾತಿಗಾಗಿ:**<br>(1) ಕನ್ನಡವನ್ನು ಒಂದು ಭಾಷೆಯಾಗಿಟ್ಟುಕೊಂಡು ಎಸ್ ಎಸ್ ಎಲ್ ಸಿ ಪರೀಕ್ಷೆ ಯಲ್ಲಿ ಉತ್ತೀರ್ಣರಾಗಿಬೇಕು;<br>ಅಥವಾ ತತ್ಸಮಾನವಾದ ವಿದ್ಯಾರ್ಹತೆಯನ್ನು ಹೊಂದಿರಬೇಕು. ಅಥವಾ<br>(2) ಪ್ರಥಮ ಚಿಕಿತ್ಸೆ ಪ್ರಮಾಣ ಪತ್ರವನ್ನು ಹೊಂದಿರಬೇಕು, ಸಂಬಂಧಪಟ್ಟ ಪ್ರಾಧಿಕಾರ ದಿಂದ ಭಾರಿ / ಲಘು ವಾಹನ ಚಾಲನ ಪರವಾನಗಿ ಪತ್ರವನ್ನು ಹೊಂದಿರಬೇಕು |

| | | | | | | |
|---|---|---|---|---|---|---|
| 31 | ಅಟೆಂಡರ್ / ಜಮೇದಾರ / ದಫೇದಾರ (ರೂ. 29600-52800) | 2 | 21 | - | ಸಂಯೋಜಿತ ಜ್ಯೇಷ್ಠತೆಯ ಆಧಾರ ಮೇಲೆ ಜವಾನ / ಕಾವಲುಗಾರ / ಪರಿಚಾರಕ (ಸೈಕಲ್ ಆರ್ಡರ್ಲಿ) ಕಸ ಗುಡಿಸುವವನು ವೃಂದದಿಂದ ಮುಂಬಡ್ತಿ ಮೂಲಕ; | ಸಂಬಂದಿಸಿದ ವೃಂದಗಳಲ್ಲಿ ಕನಿಷ್ಠ 5 ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರಬೇಕು;<br>ಪರಂತು, ಕನಿಷ್ಠ ಐದು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರುವ ನೌಕರನು ಲಭ್ಯವಿಲ್ಲದಿದ್ದಲ್ಲಿ ಮೂರು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರುವ ನೌಕರನನ್ನು ಪರಿಗಣಿಸಬಹುದು; |
| 32 | ಮೇಟಿ-ಕಂ-ಕುಕ್ (ರೂ. 29600-52800)) | 00 | 01 | - | **ಕರ್ನಾಟಕ ನಾಗರೀಕ ಸೇವೆ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021ರ** ನೇರ ನೇಮಕಾತಿ ಮೂಲಕ | (1) ಕನ್ನಡವನ್ನು ಒಂದು ಭಾಷೆಯಾಗಿಟ್ಟುಕೊಂಡು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಕಡ್ಡಾಯವಾಗಿ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು.<br>(2) ಯಾವುದೇ ಸಸ್ಯಹಾರಿ ಅಥವಾ ಮಾಂಸಹಾರಿ ಹೋಟೆಲ್ ಅಥವಾ ರೆಸ್ಟೋರೆಂಟ್‌ನಲ್ಲಿ ಅಡುಗೆ ಕೆಲಸದಲ್ಲಿ ಕಡ್ಡಾಯವಾಗಿ ಐದು ವರ್ಷಗಳ ಅನುಭವನ್ನು ಹೊಂದಿರಬೇಕು. |

| | | | | | | |
|---|---|---|---|---|---|---|
| 33 | ಜವಾನ / ಕಾವಲುಗಾರ / ಪರಿಚಾರಕ (ಸೈಕಲ್ ಆರ್ಡರ್ಲಿ) ಕಸ ಗುಡಿಸುವವನು.<br>(ರೂ. 27000-46675) | 14 | 299 | - | ಕರ್ನಾಟಕ ನಾಗರೀಕ ಸೇವೆ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021ರ ಅನುಸಾರವಾಗಿ ನೇರ ನೇಮಕಾತಿ ಮೂಲಕ | ಕನ್ನಡವನ್ನು ಒಂದು ಭಾಷೆಯಾಗಿಟ್ಟುಕೊಂಡು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. |
| 34 | ಮುನಿಸಿಪಲ್ ಸಿಬ್ಬಂದಿ<br>(ರೂ. 27000-46675) | 0 | 1 | - | **ಕರ್ನಾಟಕ ನಾಗರೀಕ ಸೇವೆ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021ರ** ನೇರ ನೇಮಕಾತಿ ಮೂಲಕ | ಕನ್ನಡವನ್ನು ಒಂದು ಭಾಷೆಯಾಗಿಟ್ಟುಕೊಂಡು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಪಂಪನಗೌಡ ಮೇಲ್ಸೀಮೆ )**
ಸರ್ಕಾರದ ಜಂಟಿ ಕಾರ್ಯದರ್ಶಿ
ಸಣ್ಣ ನೀರಾವರಿ ಮತ್ತು ಅಂತರ್ಜಲ
ಅಭಿವೃದ್ಧಿ ಇಲಾಖೆ.

## ಅನುಸೂಚಿ – II
## (ನಿಯಮ-3 ನ್ನು ನೋಡಿ)
## ಪರೀಕ್ಷಾ ವಿಧಾನ (ಯೋಜನೆ)

**1. ಶೀರ್ಷಿಕೆ ಮತ್ತು ಅನ್ವಯ**:

(1) ಈ ಯೋಜನೆಯನ್ನು ಕರ್ನಾಟಕ ಸಣ್ಣ ನೀರಾವರಿ ಇಲಾಖೆ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಅಭಿಯಂತರರು) ವಿಭಾಗ-1 / ತಾಂತ್ರಿಕ ಸಹಾಯಕ ವಿಭಾಗ-1 ಮತ್ತು ಸಹಾಯಕ ಇಂಜಿನಿಯರ್ (ವಿಭಾಗ-1) ರ ನೇಮಕಾತಿ ಯೋಜನೆ, ಎಂದು ಕರೆಯತಕ್ಕದ್ದು.

(2) ಈ ಯೋಜನೆಯ ಉಪಬಂಧವು ಕರ್ನಾಟಕ ಸಣ್ಣ ನೀರಾವರಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಅಭಿಯಂತರರು) ವಿಭಾಗ-1 / ತಾಂತ್ರಿಕ ಸಹಾಯಕ ವಿಭಾಗ-1 ಮತ್ತು ಸಹಾಯಕ ಇಂಜಿನಿಯರ್ (ಅಭಿಯಂತರರು) ವಿಭಾಗ-1ರ ಪ್ರವರ್ಗದ ಹುದ್ದೆಗಳ ನೇರ ನೇಮಕಾತಿಗೆ ಅನ್ವಯಿಸತಕ್ಕದ್ದು.

**2. ಪರಿಭಾಷೆಗಳು:**

(1) ಈ ಯೋಜನೆಯಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ಅನುಬಂಧ ಎಂದರೆ, ಈ ನಿಯಮಗಳಿಗೆ ಸೇರಿಸಲಾದ ಪರೀಕ್ಷಾ ಯೋಜನೆಯ ಅನುಬಂಧ

(ಬಿ) 'ಆಯೋಗ' ಅಂದರೆ ಕರ್ನಾಟಕ ಲೋಕ ಸೇವಾ ಆಯೋಗ;

(2) ಈ ಯೋಜನೆಯಲ್ಲಿ ಪರಿಭಾಷಿಸಿಲ್ಲದ ಆದರೆ, ಬಳಸಲಾದ ಪದಗಳು ಮತ್ತು ಅಭಿವ್ಯಕ್ತಿಯು ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿರುವಂಥ ಅಂಥದ್ದೇ ಅರ್ಥವನ್ನು ಹೊಂದಿರತಕ್ಕದ್ದು;

**3. ನೇಮಕಾತಿಯ ವಿಧಾನ:** ಈ ಯೋಜನೆಯ ಅಡಿಯಲ್ಲಿ ಆಯೋಗವು, ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆ ಮತ್ತು ವ್ಯಕ್ತಿತ್ವ ಪರೀಕ್ಷೆಯಲ್ಲಿ ಗಳಿಸಲಾದ ಮೆರಿಟ್ ಆಧಾರದ ಮೇಲೆ ನೇಮಕಾತಿಯನ್ನು ಮಾಡತಕ್ಕದ್ದು. ಸ್ಪರ್ಧಾತ್ಮಕ ಪರೀಕ್ಷೆಯನ್ನು ಕಾಲಕಾಲಕ್ಕೆ ಆಯೋಗವು ಅಧಿಸೂಚಿಸಬಹುದಾದಂಥ ದಿನಾಂಕ ಮತ್ತು ಅಂತಹ ಸ್ಥಳಗಳಲ್ಲಿ ನಡೆಸತಕ್ಕದ್ದು.

**4. ವಯೋಮಿತಿ:** ಅಭ್ಯರ್ಥಿಯು ಕನಿಷ್ಠ 21 ವರ್ಷ ವಯಸ್ಸನ್ನು ಹೊಂದಿರತಕ್ಕದ್ದು ಮತ್ತು ಅರ್ಜಿಯನ್ನು ಸ್ವೀಕರಿಸಿ ನಿರ್ದಿಷ್ಟಪಡಿಸಿದ ದಿನಾಂಕದಂತೆ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1927ರಲ್ಲಿ ನಿಗದಿಪಡಿಸಲಾಗಿರುವ ಗರಿಷ್ಠ ವಯೋಮಿತಿಯನ್ನು ಹೊಂದಿರತಕ್ಕದ್ದಲ್ಲ.

**ಪರಂತು,** ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರಲ್ಲಿ ಏನೇ ಒಳಗೊಂಡಿದ್ದರೂ ಐದು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರುವ ಮತ್ತು ಪರೀಕ್ಷಾರ್ಥ (ಪ್ರೊಬೇಷನ್) ಸೇವಾ ಅವಧಿ ಪೂರೈಸಿರುವ ಸೇವಾ ನಿರತ ಸಹಾಯಕ ಇಂಜಿನಿಯರ್ (ಅಭಿಯಂತರರು) ಮತ್ತು ಕಿರಿಯ ಇಂಜಿನಿಯರ್‌ಗಳ (ಅಭಿಯಂತರರು) ಗರಿಷ್ಠ ವಯೋಮಿತಿಯನ್ನು ಗಣನೆಗೆ ತೆಗೆದುಕೊಳ್ಳದೇ ಪರಿಗಣಿಸಬಹುದು.

**5. ವಿದ್ಯಾರ್ಹತೆ:** ಅಭ್ಯರ್ಥಿಯು ಭಾರತದಲ್ಲಿ ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಸಿವಿಲ್ ಇಂಜಿನಿಯರಿಂಗ್ ಅಥವಾ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಪದವಿಯನ್ನು ಪಡೆದವನಾಗಿರತಕ್ಕದ್ದು ಅಥವಾ ಇಂಜಿನಿಯರ್ಸ್ ಸಂಸ್ಥೆಯ ಸಹ ಸದಸ್ಯತ್ವ ಪರೀಕ್ಷೆಯ (ಭಾರತ) ನಡೆಸುವ ಭಾಗ-ಎ ಮತ್ತು ಬಿನಲ್ಲಿ (ಎಎಂಐಇ) ಅವನು ಉತ್ತೀರ್ಣನಾಗಿದ್ದಾನೆ ಎಂಬುದರ ಬಗ್ಗೆ ಇಂಜಿನಿಯರ್ಸ್ ಸಂಸ್ಥೆಯಿಂದ ಡಿಪ್ಲಮೋ ಪ್ರಮಾಣ ಪತ್ರವನ್ನು ಹೊಂದಿದವನಾಗಿರತಕ್ಕದ್ದು.

**6. ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸುವುದು:**

1. ಆಯೋಗವು ನಿರ್ಧರಿಸಬಹುದಾದಂಥ ನಮೂನೆಯಲ್ಲಿ ಮತ್ತು ನಿರ್ದಿಷ್ಟಪಡಿಸಿದಂಥ ದಿನಾಂಕಕ್ಕೆ ಮುಂಚೆ ಹಾಗೂ ನಿರ್ದಿಷ್ಟಪಡಿಸಿದ ಶುಲ್ಕಗಳನ್ನು ಪಾವತಿಸಿದ ಮೇಲೆ, ಸ್ಪರ್ಧಾತ್ಮಕ ಪರೀಕ್ಷೆಯ ಪ್ರವೇಶಕ್ಕಾಗಿ, ರಾಜ್ಯ ಸರ್ಕಾರದ ಮೀಸಲಾತಿಯ ನಿಯಮಗಳಿಗೆ ಅನುಸಾರವಾಗಿ ಅರ್ಹತಾ ಷರತ್ತುಗಳನ್ನು, ಭರ್ತಿ ಮಾಡಬೇಕಾದ ತಾತ್ಕಾಲಿಕ ಖಾಲಿ ಹುದ್ದೆಗಳ ಸಂಖ್ಯೆ ಮತ್ತು ಅದರ ಪ್ರವರ್ಗವನ್ನು ಕರ್ನಾಟಕ ರಾಜ್ಯಪತ್ರದಲ್ಲಿ ನಿರ್ದಿಷ್ಟಪಡಿಸಿದ ಖಾಲಿ ಹುದ್ದೆಗಳ ಬಗ್ಗೆ ಜಾಹೀರಾತಿನ ಮೂಲಕ ಪ್ರಕಟಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸತಕ್ಕದ್ದು. ಅಂಥ ಜಾಹೀರಾತನ್ನು ಸಂಕ್ಷಿಪ್ತವಾಗಿ ಸೂಕ್ತವೆಂದು ಭಾವಿಸಬಹುದಾದಂಥ ಭಾಷೆಯಲ್ಲಿ ವ್ಯಾಪಕವಾಗಿ ಪ್ರಚಾರದಲ್ಲಿರುವ ಒಂದಕ್ಕಿಂತ ಹೆಚ್ಚಿನ ದಿನ ಪತ್ರಿಕೆಗಳಲ್ಲಿ ಮತ್ತು ಅಂಥ ಪ್ರಕಟಣೆಯ ಇತರೇ ಮಾಧ್ಯಮದಲ್ಲಿ ಸಹ ಪ್ರಕಟಿಸತಕ್ಕದ್ದು. ಆಯೋಗವು ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸುವುದಕ್ಕೆ ಸಂಬಂಧಿಸಿದ ಎಲ್ಲಾ ವ್ಯವಸ್ಥೆಗಳಿಗಾಗಿ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

2. ಸ್ಪರ್ಧಾತ್ಮಕ ಪರೀಕ್ಷೆಯ ಪ್ರವೇಶಾತಿಗೆ ಆಯೋಗದಿಂದ ಪ್ರವೇಶ ಪತ್ರವನ್ನು ಪಡೆಯದ ಹೊರತು ಯಾವುದೇ ಅಭ್ಯರ್ಥಿಗೆ ಅವಕಾಶ ನೀಡತಕ್ಕದ್ದಲ್ಲ. ಅಭ್ಯರ್ಥಿಯ ಅರ್ಹತೆ ಅಥವಾ ಸ್ಪರ್ಧಾತ್ಮಕ ಪರೀಕ್ಷೆಯ ಪ್ರವೇಶಾತಿಗೆ ಸಂಬಂಧಿಸಿದಂತೆ ಆಯೋಗದ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**7. ಪರೀಕ್ಷೆಯ ಪಠ್ಯ ವಿಷಯಗಳು-**

(1) ಸ್ಪರ್ಧಾತ್ಮಕ ಪರೀಕ್ಷೆಯು,-

(i) ಅನುಬಂಧದಲ್ಲಿ ನಿರ್ದಿಷ್ಟಪಡಿಸಿರುವ ಕನ್ನಡ, ಆಂಗ್ಲ ಭಾಷೆ, ಸಾಮಾನ್ಯ ಕನ್ನಡ ಮತ್ತು ಐಚ್ಛಿಕ ವಿಷಯಗಳಲ್ಲಿ ಲಿಖಿತ ಪರೀಕ್ಷೆ;

ಮತ್ತು

(ii) ವ್ಯಕ್ತಿತ್ವ ಪರೀಕ್ಷೆ

(2) ವ್ಯಕ್ತಿತ್ವ ಪರೀಕ್ಷೆಗೆ ಗರಿಷ್ಠ ಅಂಕಗಳು ಸ್ಪರ್ಧಾತ್ಮಕ ಪರೀಕ್ಷೆಯ ಅಂಕಗಳಿಗಿಂತ ಶೇಕಡಾ 5ನ್ನು ಮೀರತಕ್ಕದ್ದಲ್ಲ. ಈ ಮೇಲಿನ ವಿಷಯಗಳನ್ನು ಒಳಗೊಂಡಿರತಕ್ಕದ್ದು.

**8. ವ್ಯಕ್ತಿತ್ವ ಪರೀಕ್ಷೆಗೆ ಅಭ್ಯರ್ಥಿಗಳನ್ನು ಕರೆಯುವುದು:-** ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಮೆರಿಟ್‌ನ್ನು ಪರಿಗಣನೆಗೆ ತೆಗೆದುಕೊಂಡು, ಪ್ರತಿಯೊಂದು ಮೀಸಲಾತಿಯ ಪ್ರವರ್ಗದಲ್ಲಿ (ಖಾಲಿ ಹುದ್ದೆ: ಅಭ್ಯರ್ಥಿ) 1:5ರ ಅನುಪಾತದಲ್ಲಿ ವ್ಯಕ್ತಿತ್ವ ಪರೀಕ್ಷೆಗಾಗಿ ಆಯೋಗದ ಮುಂದೆ ಹಾಜರಾಗಲು ಅಭ್ಯರ್ಥಿಗಳಿಗೆ ಕರೆಯತಕ್ಕದ್ದು;

**9. ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿ:-** ಆಯೋಗವು, ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇಕಡಾವಾರು ಮತ್ತು ವ್ಯಕ್ತಿತ್ವ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಇತರೇ ಹಿಂದುಳಿದ ವರ್ಗ ಮತ್ತು ಇತರರಿಗಾಗಿ ಇರುವ ಮೀಸಲಾತಿಯ ನೇಮಕಾತಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಆದೇಶಗಳನ್ನು ಪರಿಗಣನೆಗೆ ತೆಗೆದುಕೊಂಡು ಇವುಗಳ ಆಧಾರದ ಮೇಲೆ ಮೆರಿಟ್ ಕ್ರಮದಲ್ಲಿ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

**10. ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆ ಪಟ್ಟಿ:-**

(1) ಆಯೋಗವು, ಖಂಡ 9ರಲ್ಲಿ ನಿರ್ದಿಷ್ಟಪಡಿಸಿರುವಂತೆ ಮೆರಿಟ್‌ನ ಕ್ರಮದಲ್ಲಿ ವ್ಯಕ್ತಿತ್ವ ಪರೀಕ್ಷೆಗೆ ಹಾಜರಾಗಿರುವ ಆದರೆ ಅಂತಿಮ ಆಯ್ಕೆ ಪಟ್ಟಿಯಲ್ಲಿ ಇರದ ಅಭ್ಯರ್ಥಿಗಳ ಹೆಚ್ಚುವರಿ ಪಟ್ಟಿಯೊಂದನ್ನು ಸಿದ್ಧಪಡಿಸತಕ್ಕದ್ದು. ಹೆಚ್ಚುವರಿ ಆಯ್ಕೆಪಟ್ಟಿಯಲ್ಲಿ ಇರುವ ಅಭ್ಯರ್ಥಿಗಳ ಸಂಖ್ಯೆಯು 6ನೇ ಖಂಡದ ಮೇರೆಗೆ ಪ್ರತಿಯೊಂದು ಪ್ರವರ್ಗದಲ್ಲಿ ಅಧಿಸೂಚಿಸಿದ ಖಾಲಿ ಸ್ಥಾನಗಳ ಸಂಖ್ಯೆಯ ಶೇಕಡಾ ಹತ್ತರಷ್ಟು ಸಂಖ್ಯೆಗೆ ಸಮಾನವಾಗಿರತಕ್ಕದ್ದು.

(2) ಅಂತಿಮ ಆಯ್ಕೆ ಪಟ್ಟಿಯಲ್ಲಿ ಭರ್ತಿಯಾಗದ ಖಾಲಿ ಸ್ಥಾನಗಳನ್ನು ಮೀರದಷ್ಟರ ಮಟ್ಟಿಗೆ ಹೆಚ್ಚುವರಿ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ಹುದ್ದೆಯಲ್ಲಿ ನೇಮಿಸಬಹುದು.

**11. ಅಭ್ಯರ್ಥಿಗಳ ನೇಮಕಾತಿ:-**

(1) 9ನೇ ಖಂಡದ ಮೇರೆಗೆ ಆಯ್ಕೆ ಪ್ರಾಧಿಕಾರವು ಸಿದ್ಧಪಡಿಸಿದ ಪಟ್ಟಿಯಲ್ಲಿ ಹೆಸರುಗಳನ್ನು ಒಳಗೊಂಡಿರುವ ಅಭ್ಯರ್ಥಿಗಳನ್ನು ಅವಶ್ಯಕವೆಂದು ಪರಿಗಣಿಸಬಹುದಾದಂತಹ ವಿಚಾರಣೆಯ ತರುವಾಯ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವಿಭಾಗ-I ಅಥವಾ ತಾಂತ್ರಿಕ ಸಹಾಯಕ ವಿಭಾಗ-I ಅಥವಾ ಸಹಾಯಕ ಇಂಜಿನಿಯರ್ ವಿಭಾಗ-I ರ ಹುದ್ದೆಯನ್ನು ಹೊಂದಲು ಎಲ್ಲಾ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಇರುವ ಅವರ ಸೂಕ್ತತೆಯ ಬಗ್ಗೆ ಮನವರಿಕೆ ಮಾಡಿಕೊಂಡ ತರುವಾಯ, ಪಟ್ಟಿಯಲ್ಲಿ ಕಂಡುಬರುವ ಅವರ ಹೆಸರುಗಳ ಕ್ರಮದಲ್ಲಿ ನೇಮಕಾತಿ ಪ್ರಾಧಿಕಾರವು ನೇಮಕ ಮಾಡಬಹುದು.

(2) 10ನೇ ಖಂಡದ ಮೇರೆಗೆ ಸಿದ್ಧಪಡಿಸಿದ ಹೆಚ್ಚುವರಿ ಪಟ್ಟಿಯಲ್ಲಿ ಹೆಸರನ್ನು ಒಳಗೊಂಡಿರುವ ಅಭ್ಯರ್ಥಿಗಳನ್ನು ಅವಶ್ಯಕವೆಂದು ಪರಿಗಣಿಸಬಹುದಾದಂತಹ ವಿಚಾರಣೆಯ ತರುವಾಯ, ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿ ನಿರ್ದಿಷ್ಟ ವೃಂದ ಅಥವಾ ಹುದ್ದೆಯಲ್ಲಿ ತಮ್ಮ ಹೆಸರು ಇರುವ ಪಟ್ಟಿಯಲ್ಲಿ, ಅಂತಿಮ ಆಯ್ಕೆ ಪಟ್ಟಿಯಲ್ಲಿ ಸೇರಿದ ಅಭ್ಯರ್ಥಿಗಳು ವರದಿ ಮಾಡಿಕೊಳ್ಳದ ಕಾರಣದಿಂದಾಗಿ ಭರ್ತಿಯಾಗದೆ ಉದ್ಭವಿಸಿದ ಖಾಲಿ ಸ್ಥಾನಗಳಲ್ಲಿ ಸಹ ನೇಮಕಾತಿ ಪ್ರಾಧಿಕಾರವು ನೇಮಕ ಮಾಡಬಹುದು.

(3) ಅಂತಿಮ ಆಯ್ಕೆ ಪಟ್ಟಿಯಲ್ಲಿ 9 ಮತ್ತು 10ನೇ ಖಂಡದ ಮೇರೆಗೆ ಪ್ರಕಟಿಸಲಾದ ಹೆಚ್ಚುವರಿ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರಿನ ಸೇರಿಸುವಿಕೆಯು ಅಥವಾ ಅಭ್ಯರ್ಥಿಗೆ ನೇಮಕಾತಿಯ ಯಾವುದೇ ಹಕ್ಕನ್ನು ನೀಡತಕ್ಕದ್ದಲ್ಲ.

**12. ಪಟ್ಟಿಯ ಮಾನ್ಯತೆಯ ಅವಧಿ:-** 9 ಮತ್ತು 10ನೇ ಖಂಡದ ಮೇರೆಗೆ ಸಿದ್ಧಪಡಿಸಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯು, ಕರ್ನಾಟಕ ಸಿವಿಲ್ ಸೇವೆ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021 ರ 11ನೇ ನಿಯಮದ ಉಪಬಂಧಗಳ ಅಡಿಯಲ್ಲಿ ಸಿಂಧುವಾಗಿರತಕ್ಕದ್ದು.

**13. ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು, 1977ರ ಅನ್ವಯ:-** ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು, 1977ರ ಉಪಬಂಧಗಳು, ಈ ಯೋಜನೆಯಲ್ಲಿ ಯಾವುದೇ ಉಪಬಂಧವನ್ನು ಮಾಡದಿರುವ ವಿಷಯಗಳಿಗೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು.

## ಅನುಬಂಧ

(ಅನುಸೂಚಿ-II ರ 2ನೇ ಖಂಡದ ಉಪಖಂಡ (1)ರ ಬಾಬ್ತು (ಎ) ಮತ್ತು 7ನೇ ಖಂಡದ ಉಪಖಂಡ (i) ರ ಬಾಬ್ತು (i) ನ್ನು ನೋಡಿ)

## ಪಠ್ಯಕ್ರಮ

**ಲಿಖಿತ ಪರೀಕ್ಷೆ:- (1)** ಕನ್ನಡ ಭಾಷೆಯ ಪತ್ರಿಕೆಯನ್ನು ಹೊರತುಪಡಿಸಿ, ಎಲ್ಲಾ ಪ್ರಶ್ನೆ ಪತ್ರಿಕೆಗಳಿಗೆ ತಮ್ಮ ಕೈ ಬರಹದಲ್ಲಿ ಇಂಗ್ಲಿಷ್‌ನಲ್ಲಿ ಉತ್ತರಿಸತಕ್ಕದ್ದು.

(1) **ಇಂಗ್ಲಿಷ್**-ಗರಿಷ್ಠ ಅಂಕಗಳು-100. ಪತ್ರಿಕೆಯ ಅವಧಿ 1 ಗಂಟೆ 30 ನಿಮಿಷಗಳು.

(2) **ಕನ್ನಡ**-ಗರಿಷ್ಠ ಅಂಕಗಳು-100. ಪತ್ರಿಕೆಯ ಅವಧಿ 1 ಗಂಟೆ 30 ನಿಮಿಷಗಳು.

**ಟಿಪ್ಪಣಿ-1**: ಕಡ್ಡಾಯ ಪತ್ರಿಕೆಗಳಲ್ಲಿ (ಇಂಗ್ಲೀಷ್ ಮತ್ತು ಕನ್ನಡ) ಪಡೆದ ಅಂಕಗಳು ಅರ್ಹತೆಯ ಸ್ವರೂಪದಲ್ಲಿರತಕ್ಕದ್ದು. ಈ ಪತ್ರಿಕೆಗಳಲ್ಲಿ ಅರ್ಹತೆ ಪಡೆಯಲು, ಪ್ರತಿ ಪ್ರತಿಕೆಯಲ್ಲಿ ಕನಿಷ್ಠ ಶೇಕಡಾ ಮೂವತ್ತನ್ನು ಮತ್ತು ಒಟ್ಟಾರೆಯಾಗಿ ಶೇಕಡಾ ಮೂವತ್ತೈದನ್ನು ನಿಗಧಿಪಡಿಸಲಾಗಿದೆ. ಈ ಎರಡು ಪತ್ರಿಕೆಗಳಲ್ಲಿ ಪಡೆದ ಅಂಕಗಳನ್ನು ಆಯ್ಕೆಯ ಅರ್ಹತೆಯನ್ನು ನಿರ್ಧರಿಸುವುದಕ್ಕಾಗಿ ಪರಿಗಣಿಸತಕ್ಕದ್ದಲ್ಲ. ಅರ್ಹತಾ ಪತ್ರಿಕೆಗಳಲ್ಲಿ, ಅಂದರೆ, ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ನಿಗದಿಪಡಿಸಲಾದ ಅಂಕಗಳನ್ನು ಪಡೆಯದ ಅಭ್ಯರ್ಥಿಗಳು ವ್ಯಕ್ತಿತ್ವ ಪರೀಕ್ಷೆ ಮತ್ತು ಆಯ್ಕೆಗೆ ಅರ್ಹರಾಗಿರತಕ್ಕದ್ದಲ್ಲ.

**(2) ಸಾಮಾನ್ಯ ಜ್ಞಾನ:**- ಗರಿಷ್ಠ ಅಂಕಗಳು-100. ಪತ್ರಿಕೆಯ ಅವಧಿ 1 ಗಂಟೆ 30 ನಿಮಿಷಗಳು.

**(3) ಐಚ್ಛಿಕ ವಿಷಯಗಳು:**-

(1)ಒಬ್ಬ ಅಭ್ಯರ್ಥಿಯು ಭಾಗ-ಎ ಯಲ್ಲಿ ನಿರ್ದಿಷ್ಟಪಡಿಸಿದ ಯಾವುದಾದರೂ ಎರಡು ವಿಷಯಗಳನ್ನು ಮತ್ತು ಭಾಗ-ಬಿ ಯಲ್ಲಿ ನಿರ್ದಿಷ್ಟಪಡಿಸಿದ ಯಾವುದಾದರೂ ಎರಡು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು. (ಪ್ರಶ್ನೆಗಳು......xx.... ಸ್ವರೂಪದವಾಗಿರುತ್ತವೆ)

**ಪರಂತು,** ಭಾಗ-'ಎ' ಯಲ್ಲಿ ರಸ್ತೆಗಳು ಅಥವಾ ಸೇತುವೆಗಳು ಅಥವಾ ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ ವಿಷಯಗಳನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಯು, ಭಾಗ-'ಬಿ' ಯಲ್ಲಿ ಸಂದರ್ಭಾನುಸಾರವಾಗಿ ಹೆದ್ದಾರಿ ಇಂಜಿನಿಯರಿಂಗ್ ಅಥವಾ ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಅರ್ಹರಾಗಿರತಕ್ಕದ್ದಲ್ಲ.

(2) ಪ್ರತಿಯೊಂದು ವಿಷಯಕ್ಕೆ ಗರಿಷ್ಠ ಅಂಕಗಳು 100. ಪ್ರತಿಯೊಂದು ಪತ್ರಿಕೆಯ ಅವಧಿ 3 ಗಂಟೆಗಳು.

(3) ಪರೀಕ್ಷೆಯ ಗುಣಮಟ್ಟ ಮತ್ತು ಪಠ್ಯಕ್ರಮವು ಬಿ.ಇ ಪದವಿ ಅಥವಾ ಎಎಂಐಇ (ಇಂಜಿನಿಯರ್ ಗಳ ಸಂಸ್ಥೆಯ ಸಹಾಯಕ ಸದಸ್ಯರು)

ಪರೀಕ್ಷೆಯಲ್ಲಿ ನಿಗದಿಪಡಿಸಿದಂತಿರತಕ್ಕದ್ದು.

| ಭಾಗ-ಎ | ಭಾಗ-ಬಿ |
|---|---|
| (i) ನೀರಾವರಿ | (i) ಸುಧಾರಿತ ರಚನೆ |
| (ii) ರಸ್ತೆಗಳು ಮತ್ತು ಸೇತುವೆಗಳು | (ii) ಪೂರ್ವ-ಒತ್ತಡ ಕಾಂಕ್ರೀಟ್ |
| (iii) ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ | (iii) ಸುಧಾರಿತ ಮಣ್ಣಿನ ಮೆಕಾನಿಕ್ಸ್ |
| (iv) ನಿರ್ಮಾಣ ತಂತ್ರಜ್ಞಾನ ಮತ್ತು ನಿರ್ವಹಣೆ | (iv) ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ |
| | (v) ಹೆದ್ದಾರಿ ಇಂಜಿನಿಯರಿಂಗ್ |
| | (vi) ಜಲಚಾಲನಾ ಶಾಸ್ತ್ರ (ಹೈಡ್ರಾಲಿಕ್ಸ್) ಮತ್ತು ಅಣೆಕಟ್ಟುಗಳು |
| | (vii) ಜಲ ವಿಜ್ಞಾನ (ಹೈಡ್ರಾಲಜಿ) |
| | (viii) ಸ್ಥಿತಿಸ್ಥಾಪಕ ಗುಣದ ಸಿದ್ಧಾಂತ |
| | (ix) ಬೇಸಿಕ್ ಎಲೆಕ್ಟ್ರಾನಿಕ್ಸ್ |

**ಟಿಪ್ಪಣಿ :** ಸಾಮಾನ್ಯ ಜ್ಞಾನ ಮತ್ತು ಐಚ್ಛಿಕ ವಿಷಯಗಳ ಪ್ರಶ್ನೆ ಪತ್ರಿಕೆಗಳನ್ನು, ಕನ್ನಡ ಹಾಗೂ ಇಂಗ್ಲೀಷ್‌ನಲ್ಲಿ ಸಿದ್ಧಪಡಿಸತಕ್ಕದ್ದು. ಇಂಗ್ಲೀಷ್ ಕನ್ನಡ, ಮತ್ತು ಸಾಮಾನ್ಯ ಜ್ಞಾನ ಮತ್ತು ಐಚ್ಛಿಕ ವಿಷಯಗಳಿಗೆ ಸಂಬಂಧಿಸಿದ ಪತ್ರಿಕೆಗಳ ಪಠ್ಯಕ್ರಮವು ಈ ಕೆಳಗಿನಂತಿದೆ:-

## ಪಠ್ಯಕ್ರಮ

**ಇಂಗ್ಲೀಷ್ :** ಇಂಗ್ಲೀಷ್ ಪತ್ರಿಕೆಯು ಎಸ್.ಎಸ್.ಎಲ್.ಸಿ ಮಟ್ಟದಲ್ಲಿರತಕ್ಕದ್ದು ಮತ್ತು ನೀಡಲಾದ ನಿರ್ದಿಷ್ಟ ಪ್ಯಾಸೆಜ್‌ನ ಗ್ರಹಿಕೆ, ಸಂಕ್ಷಿಪ್ತ ಬರವಣಿಗೆ, ಪದಗಳ ಬಳಕೆ, ಶಬ್ದಕೋಶ, ಲಘು ಪ್ರಬಂಧ ಮತ್ತು ಸಂವಹನ ಕೌಶಲ್ಯಗಳನ್ನು ಒಳಗೊಂಡಿರತಕ್ಕದ್ದು. ಲಘು ಪ್ರಬಂಧಕ್ಕಾಗಿ, ವಿಷಯಗಳ ಆಯ್ಕೆಯನ್ನು ನೀಡಬಹುದು. ಅಭ್ಯರ್ಥಿಯು ಪ್ರಬಂಧದ ವಿಷಯಕ್ಕೆ ಹತ್ತಿರವಾಗುವಂತೆ ಕ್ರಮಬದ್ಧ ರೀತಿಯಲ್ಲಿ ತಮ್ಮ ಗ್ರಹಿಕೆಗಳನ್ನು ಸುವ್ಯವಸ್ಥಿತ ವಿಧಾನದಲ್ಲಿ ಮತ್ತು ಸಂಕ್ಷಿಪ್ತವಾಗಿ ಬರೆಯಬೇಕೆಂದು ನಿರೀಕ್ಷಿಸಲಾಗುವುದು. ಪ್ಯಾಸೇಜ್‌ಗಳ ಸಾರಾಂಶ ಬರೆಯುವಂತೆ ಅಥವಾ ಸಂಕ್ತಿಪವಾಗಿ ಬರೆಯುವಂತೆ ಹೊಂದಿಸತಕ್ಕದ್ದು. ಪರಿಣಾಮಕಾರಿ ಮತ್ತು ಸ್ಪಷ್ಟ ಅಭಿವ್ಯಕ್ತಿಗೆ ಪ್ರಶಂಸೆ ದೊರೆಯತಕ್ಕದ್ದು.

**ಕನ್ನಡ :** ಕನ್ನಡ ಪತ್ರಿಕೆಯು ಎಸ್.ಎಸ್.ಎಲ್.ಸಿ ಮಟ್ಟದಲ್ಲಿರತಕ್ಕದ್ದು ಮತ್ತು ನೀಡಲಾದ ನಿರ್ದಿಷ್ಟ ಪ್ಯಾಸೆಜ್‌ನ ಗ್ರಹಿಕೆ, ಸಂಕ್ಷಿಪ್ತ ಬರವಣಿಗೆ, ಪದಗಳ ಬಳಕೆ, ಶಬ್ದಕೋಶ, ಲಘು ಪ್ರಬಂಧ ಮತ್ತು ಇಂಗ್ಲೀಷ್‌ನಿಂದ ಕನ್ನಡಕ್ಕೆ ಭಾಷಾಂತರವನ್ನು ಒಳಗೊಂಡಿರತಕ್ಕದ್ದು. ಲಘು ಪ್ರಬಂಧಕ್ಕಾಗಿ, ವಿಷಯಗಳ ಆಯ್ಕೆಯನ್ನು ನೀಡತಕ್ಕದ್ದು. ಅಭ್ಯರ್ಥಿಗಳು ಪ್ರಬಂಧದ ವಿಷಯದ ಬಗ್ಗೆ ಗಾಢವಾದ ತಿಳುವಳಿಕೆಯನ್ನು ಹೊಂದಿರುತ್ತಾರೆ ಎಂದು; ಕ್ರಮಬದ್ಧ ರೀತಿಯಲ್ಲಿ ತಮ್ಮ ವಿಚಾರಧಾರೆಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಮತ್ತು ಸಂಕ್ಷಿಪ್ತವಾಗಿ ಬರೆಯುವರೆಂದು ನಿರೀಕ್ಷಿಸಲಾಗಿದೆ: ಪ್ಯಾಸೇಜ್‌ಗಳನ್ನು, ಅಥವಾ ಸಾರಾಂಶವನ್ನು ಬರೆಯುವಂತೆ ಹೊಂದಿಸತಕ್ಕದ್ದು. ಪರಿಣಾಮಕಾರಿ ಮತ್ತು ಸ್ಪಷ್ಟ ಅಭಿವ್ಯಕ್ತಿಗೆ ಪ್ರಶಂಸೆ ದೊರೆಯತಕ್ಕದ್ದು.

**ಸಾಮಾನ್ಯ ಜ್ಞಾನ :-** ಸಾಮಾನ್ಯ ಜ್ಞಾನವು, ಯಾವುದೇ ವೈಜ್ಞಾನಿಕ ವಿಷಯಗಳ ವಿಶೇಷ ಅಧ್ಯಯನವನ್ನು ಮಾಡದಿರುವ ವಿದ್ಯಾವಂತ ವ್ಯಕ್ತಿಯಿಂದ ನಿರೀಕ್ಷಿಸಬಹುದಾದಂತೆ ಪ್ರಚಲಿತ ಘಟನೆಗಳು ಮತ್ತು ಅವರ ವೈಜ್ಞಾನಿಕ ವಿಚಾರಗಳಲ್ಲಿ ದೈನಂದಿನ ಅವಲೋಕನವನ್ನು ಮತ್ತು ಅನುಭವದಂಥ ಪ್ರಚಲಿತ ವಿಷಯಗಳನ್ನು ಒಳಗೊಂಡಿರತಕ್ಕದ್ದು. ಈ ಪತ್ರಿಕೆಗಳಲ್ಲಿ ಅಭ್ಯರ್ಥಿಗಳು ವಿಶೇಷ ಅಧ್ಯಯನವಿಲ್ಲದೆ ಉತ್ತರಿಸಲು ಸಮರ್ಥರಾಗಬಹುದಾದ ಭಾರತದ ಇತಿಹಾಸ ಮತ್ತು ಭೌಗೋಳಿಕ ಅಧ್ಯಯನ ಸ್ವರೂಪದ ಪ್ರಶ್ನೆಗಳನ್ನು ಸಹ ಒಳಗೊಂಡಿರಬಹುದು.

## ಐಚ್ಛಿಕ ವಿಷಯಗಳು (ಭಾಗ 'ಎ')

### I ನೀರಾವರಿ :-

**1. ಸಾಮಾನ್ಯ:-** ಪಾರಿಭಾಷಿಕ ಪದಗಳು, ಭಾರತದಲ್ಲಿ ನೀರಾವರಿಯ ಇತಿಹಾಸ, ನೀರಾವರಿ ಪದ್ಧತಿ, ನೀರಾವರಿ ಅಭಿವೃದ್ಧಿ ಕಾರ್ಯಸಾಧ್ಯತೆಯನ್ನು ನಿರ್ವಹಿಸುವ ಸಂಗತಿಗಳು.

**2. ನೀರಾವರಿ ಪದ್ಧತಿಗಳು :-** ಬಾವಿ ನೀರಾವರಿ, ಏತ ನೀರಾವರಿ, ಕಾಲುವೆಗಳ ಮೂಲಕ ನೀರು ಹರಿಸುವ ನೀರಾವರಿ, ಜಲ ಪ್ರವಾಹ ನೀರಾವರಿ ಮತ್ತು ದಕ್ಷಿಣ ಭಾರತದ ಡೆಲ್ಟ ನೀರಾವರಿ, ತುಂತುರು ನೀರಾವರಿ, ವಿವಿಧ ಪದ್ಧತಿಗಳ ತೌಲನಿಕ ಅಧ್ಯಯನ.

**3. ನೀರಾವರಿ ಯೋಜನೆಗಳು :-** ನೀರಾವರಿ ಯೋಜನೆಗಳ ಪರೀಕ್ಷೆಗಳು ಮತ್ತು ಯೋಜನೆ ತಯಾರಿಕೆ, ಉತ್ಪಾದಕ ಮತ್ತು ಸಂರಕ್ಷಕ ಕಾರ್ಯಗಳು, ಯೋಜನಾ ಸಮೀಕ್ಷೆಗಳ ವಿವರಗಳು, ಜಲಾಶಯ ನಿರ್ಮಿಸಲು ಸ್ಥಳ, ಕಾಲುವೆ ಸರಿಹೊಂದಾಣಿಕೆ, ನಕ್ಷೆ ತಯಾರಿಕೆ, ನೀರಾವರಿ ಕಾಮಗಾರಿಗಳ ಅಂದಾಜುಗಳು ಮತ್ತು ವರದಿಗಳು, ಶೇಖರಣಾ ಜಲಾಶಯಗಳ ಹಣಕಾಸು ವಿನ್ಯಾಸಕ್ಕಾಗಿ ವೀಕ್ಷಣೆಯ ಅಂದಾಜು ಮತ್ತು ವಿವಿಧೋದ್ದೇಶ ಯೋಜನೆಗಳು.

**4. ನೀರಾವರಿ ಯೋಜನೆಗಳ ಆರ್ಥಿಕ ಮತ್ತು ಆಡಳಿತಾತ್ಮಕ ಅಂಶಗಳು :-** ಸಾಮಾಜಿಕ ಆರ್ಥಿಕ ಅಂಶ, ಯೋಜನೆಗಳ ಸಂಘಟನೆ ಮತ್ತು ಆಡಳಿತ, ಕಾನೂನಾತ್ಮಕ ಅಂಶಗಳು, ಖರ್ಚು ವೆಚ್ಚ ಮತ್ತು ಲಾಭದ ಅಧ್ಯಯನಗಳು, ಯೋಜನಾ ಭೂಮಿಯ ವರ್ಗೀಕರಣ ಮತ್ತು ಉಪಯೋಗ, ಜಲ ಸಂಪನ್ಮೂಲಗಳು, ನೀರಿನ ಅಗತ್ಯತೆಗಳು, ಅಂತರ್ಜಲ ಸಮೀಕ್ಷೆಗಳು.

**5. ನೀರಾವರಿ ಯೋಜನೆಯ ಜಲಶಾಸ್ತ್ರೀಯ ಅಧ್ಯಯನ:-** ಜಲಾನಯನ ಪ್ರದೇಶಗಳ ಗುಣಲಕ್ಷಣಗಳು, ಹರಿದು ಹೋಗುವ ನೀರಿನ ಆವರ್ತನ, ಮಳೆ ಸುರಿತದ ನಷ್ಟಗಳ ಶೋಧನೆ, ಬಾಷ್ಪೀಕರಣ, ವಿಸರ್ಜನೆ ಮತ್ತು ವ್ಯಯ ಮಾಡುವಿಕೆ, ಉಪಯೋಗ, ಪ್ರವಾಹ ಆವರ್ತನ ಅಧ್ಯಯನಗಳು, ಪ್ರವಾಹ ಜಲರಾಶಿ ಗ್ರಾಫ್‌ಗಳು, ಘಟಕ ಜಲರಾಶಿ ಗ್ರಾಫ್‌ಗಳು, ಸಿಂಥೆಟಿಕ್ ಘಟಕ ಗ್ರಾಫ್‌ಗಳು.

**6. ನೀರಾವರಿಯ ನೀರನ್ನು ಹರಿಸುವ ಪ್ರಮಾಣ ಮತ್ತು ಆವರ್ತನ:** ನೀರಾವರಿ ನೀರಿನ ಗುಣಮಟ್ಟ, ಲವಣತ್ವ ಮತ್ತು ಕ್ಷಾರೀಯತೆ, ಭೂ ಚರಂಡಿ ವ್ಯವಸ್ಥೆಯ ನಿರ್ವಹಣಾ ಅಂಶಗಳು, ಮಣ್ಣಿನ ಪರೀಕ್ಷೆ, ರಚನೆ ಮತ್ತು ಫಲವತ್ತತೆ, ಮಣ್ಣಿನ ಆರ್ದ್ರತೆಯ ನಿಯತಾಂಕಗಳು, ಒಳನುಸುಳುವಿಕೆಯ ಮಾಪನ, ಘನ ದ್ರವ್ಯ ಚಲನೆಯ ನಿಯಮಗಳು.

**7. ಜಲಾಶಯಗಳು/ಜಲಾಶಯಗಳ ವಿವಿಧ ಬಗೆಗಳು, ಪ್ರದೇಶಗಳ ಆಯ್ಕೆ:-** ಜಲಾಶಯಗಳ ಪ್ರವಾಹ ಹೀರಿಕೆ ಸಾಮರ್ಥ್ಯ ಮತ್ತು ಅದರ ಪ್ರಾಮುಖ್ಯತೆ ಪ್ರತ್ಯೇಕಿಸಲಾದ ಕೆರೆಗಳು, ಸರಣಿ ಕೆರೆಗಳು, ನದಿಗಳಿಂದ ಅಥವಾ ಹೊಳೆಗಳಿಂದ ಕಾಲುವೆಗಳ ಮೂಲಕ ತುಂಬುವ ಕೆರೆಗಳು, ಮಣ್ಣಿನ ಒಡ್ಡುಗಳ ವಿನ್ಯಾಸ, ನಿರ್ಮಾಣ, ನಿರ್ವಹಣೆ ಮತ್ತು ಹೆಚ್ಚುವರಿ ಕಾಮಗಾರಿಗಳ ವಿನ್ಯಾಸ, ಕೆರೆ ತೂಬುಗಳು, ಚರಂಡಿ ವ್ಯವಸ್ಥೆಗಳು, ಹೆಚ್ಚುವರಿ ಕಾಮಗಾರಿಗಳ ವಿನ್ಯಾಸ. ಗಾರೆಯ ಅಣೆಕಟ್ಟುಗಳ ಕೆರೆ ತೂಬುಗಳ ವಿನ್ಯಾಸ, ನಿರ್ಮಾಣ ಮತ್ತು ನಿರ್ವಹಣಾ ಅಂಶಗಳು, ಚರಂಡಿ ಗ್ಯಾಲರಿಗಳು, ಪ್ರವಾಹದ ನೀರಿನ ವ್ಯವಸ್ಥೆಗಾಗಿ ಹೆಚ್ಚುವರಿ ಕಾಮಗಾರಿಗಳ ವಿವಿಧ ಮಾದರಿಗಳು, ಮುಖ್ಯ ತೂಬುಗಳು ಮತ್ತು ಅಣೆಕಟ್ಟುಗಳಲ್ಲಿನ ಭದ್ರತಾ ತೂಬುಗಳು.

**8. ಅಣೆಕಟ್ಟುಗಳು ಅಥವಾ ನದಿ ಒಡ್ಡುಗಳು:-** ನದಿ ಒಡ್ಡುಗಳ ವಿಧಗಳು, ಪ್ರವೇಶ ಸಾಧ್ಯವಾಗಿರುವ ಸ್ತರಕ್ಕೆ ಸಂಬಂಧಿಸಿದ ಒಡ್ಡುಗಳು, ನದಿ ನಿಯಂತ್ರಕಗಳ ವಿನ್ಯಾಸ ಮತ್ತು ನಿರ್ಮಾಣ ಸುಭದ್ರತೆ ಮತ್ತು ಮುಖ್ಯ ಕೋಡಿ ಕಾಲುವೆಗಳು, ಕ್ರೆಸ್ಟ್ ತಾಣಗಳು, ಪ್ರವಾಹ ದಂಡೆಗಳು ಮತ್ತು ರಕ್ಷಣಾತ್ಮಕ ಕಾಮಗಾರಿಗಳು.

**9. ವಿತರಣಾ ವ್ಯವಸ್ಥೆ:-** ಕಾಲುವೆಗಳ ವರ್ಗೀಕರಣ, ಕಾಲುವೆ ವಿಭಾಗಗಳ ಜೋಡಣೆ ವಿನ್ಯಾಸದ ವಿಧಾನಗಳು, ನದಿ ಮುಖಜ ಭೂಮಿ ಇರುವಂಥ ಮತ್ತು ನದಿ ಮುಖಜ ಭೂಮಿ ಇರದಂಥ ಭೂಭಾಗದಲ್ಲಿನ ಕಾಲುವೆಗಳಲ್ಲಿನ ಹರಿವು ಸಾಮರ್ಥ್ಯಗಳು ಮತ್ತು ವೇಗಗಳು, ವಿತರಕ ವ್ಯವಸ್ಥೆಯ ಸ್ಥಳ ಮತ್ತು ವಿನ್ಯಾಸ, ಅಡ್ಡಹಾಯುವ ಚರಂಡಿ ಕಾಮಗಾರಿಗಳ ವಿನ್ಯಾಸ, ಹೂಳು ಮತ್ತು ಕಶ್ಮಲ ಕೊಚ್ಚಿಕೊಂಡು ಹೋಗುವುದು. ಕೆನಡಿಯ ಸಿದ್ಧಾಂತ, ಜಲಾಶಯಗಳಲ್ಲಿ ಕೆರೆಗಳಲ್ಲಿ ಮತ್ತು ಕಾಲುವೆಗಳಲ್ಲಿ ಹೂಳು ಸಂಗ್ರಹ, ಹೂಳಿನ ಸಂಗ್ರಹ ತಡೆ ವಿಧಾನಗಳು, ಮಣ್ಣು ಸವೆತ ಮತ್ತು ಅದಕ್ಕೆ ಕಾರಣ, ಅದರ ತಡೆಗಟ್ಟುವಿಕೆ ಮತ್ತ ನಿಯಂತ್ರಣ, ಜಲಾಶಯಗಳ ಮಣ್ಣು ಸವೆತದ ನಿರ್ವಹಣೆ.

**10. ನದಿ ತರಬೇತಿ:-** ರಿಸರ್ವ್ ಮೊಲ್ಲಿಸ್ ಸಿದ್ಧಾಂತದ ಸಂದರ್ಭ: ಪ್ರವಾಹ ತಡೆ ಮತ್ತು ಮಟ್ಟಗಳು, ಯಾನದ ಅಂಶಗಳು, ನದಿಯ ಬಗ್ಗೆ ಮಾದರಿ ಅಧ್ಯಯನಗಳು, ನೀರಿನ ಹರಿವಿಗೆ ಅಡ್ಡಲಾಗಿ ಕಟ್ಟಿರುವ ಒಡ್ಡಿನ ರೀತಿಯ ತಡೆ ಗೋಡೆಗಳು. (ಬೆಲ್ಸ್ ಸ್ಪರ್ಸ್ ಅಂಡ್ ಗ್ರಾನೀಸ್)

**11.** ಮಲೇರಿಯ ನಿರೋಧಕ ನಿರ್ವಹಣಾ ಕಾಮಗಾರಿಗಳು ಮತ್ತು ಅವುಗಳ ಪ್ರಾಮುಖ್ಯತೆ.

**12. ಏತ ನೀರಾವರಿ:-** ಜಾಕ್ ಭಾವಿಯ ವಿನ್ಯಾಸ, ನೀರನ್ನು ಮೇಲಕ್ಕೆತ್ತುವ ಪೈಪು, ಪಂಪು ಮಾಡುವ ಯಂತ್ರಗಳು, ವಿನ್ಯಾಸ ನಿರ್ವಹಣೆಯ ಗಣನೆ.

**13. ತಡೆಗೋಡೆ** - ತಡೆಗೋಡೆಯ ವಿಧ, ಗುರುತ್ವಾಕರ್ಷಣೆ, ಚಾಚು ತೊಲೆ, ಕೌಂಟರ್ ಫೋರ್ಟ್ ತಡೆಗೋಡೆಯ ವಿಧ.

**14.** ಪ್ರವೇಶ ಸಾಧ್ಯ ತಳಹದಿಯ ವಿನ್ಯಾಸ, ಪ್ರವೇಶ ಸಾಧ್ಯ ತಳಹದಿಯ ರಚನೆಯಲ್ಲಿ ಬ್ಲಿಗ್ಸ್ ಸಿದ್ಧಾಂತ ಮತ್ತು ಕೊಸ್ಲಾಸ್ ಸಿದ್ಧಾಂತದ ಅಳವಡಿಕೆ.

## II ರಸ್ತೆಗಳು ಮತ್ತು ಸೇತುವೆಗಳು

### <u>ರಸ್ತೆಗಳು</u>

**1. ಸಾಮಾನ್ಯ-** ಹೆದ್ದಾರಿ ಅಭಿವೃದ್ಧಿಯ ಪ್ರಾಮುಖ್ಯತೆ, ಹೆದ್ದಾರಿ ಹಣಕಾಸು ವ್ಯವಸ್ಥೆ ಮತ್ತು ಹೆದ್ದಾರಿಗೆ ಹಣಕಾಸು ಒದಗಿಸುವಿಕೆ ಮತ್ತು ಹೆದ್ದಾರಿ ವ್ಯವಸ್ಥೆಗಳು.

**2. ಸಮೀಕ್ಷೆಗಳು-** ಹೆದ್ದಾರಿ ಯೋಜನಾ ಸಮೀಕ್ಷೆಗಳು, ಸ್ಥಳ ಸಮೀಕ್ಷೆಗಳು ಮತ್ತು ಮಣ್ಣಿನ ಸಮೀಕ್ಷೆಗಳು, ನಕ್ಷೆಗಳು ಮತ್ತು ಕೋಷ್ಟಕಗಳ (ನಗರ ಮತ್ತು ಗ್ರಾಮೀಣ ಪ್ರದೇಶಗಳು) ರೂಪದಲ್ಲಿ ದತ್ತಾಂಶ ಸಲ್ಲಿಕೆ, ಹೆದ್ದಾರಿ ಯೋಜನೆಗಳು ಮತ್ತು ವಿಶಿಷ್ಟ ವಿವರಣೆಗಳು.

**3. ಹೆದ್ದಾರಿ ವಿನ್ಯಾಸ-** ಭೌಗೋಳಿಕ ವಿನ್ಯಾಸ- ದಾರಿಯ ಹಕ್ಕುಗಳು, (ರೈಟ್ಸ್ ಆಫ್ ವೇ) ಹೆದ್ದಾರಿ ಸಾಮರ್ಥ್ಯ, ಉದ್ದೇಶಿತ ವೇಗ, ಕ್ರಾಸ್ ಸೆಕ್ಷನ್ ಸೈಟ್ ಡಿಸ್ಟೆನ್ಸ್ಸ್, (ರಸ್ತೆಯ ಅಡ್ಡಸೀಳು ನೋಟು ಮತ್ತು ಅಂತರ ವಿನ್ಯಾಸ), ಗ್ರೇಡ್ ಲೈನುಗಳು, ರಸ್ತೆಯ ತಳ ನಕಾಸೆ, ದಾರಿಯ ನಿರ್ಮಾಣ, ಅಂತರ್ ವಿಭಾಗಗಳು ಮತ್ತು ಆಂತರಿಕ ಬದಲಾವಣೆಗಳು, ಗ್ರೇಡ್ ಸೆಪರೇಟರ್ಸ್‌ಗಳು, ರೋಟರಿ ಅಂತರ್ ವಿಭಾಗಗಳು ಇತ್ಯಾದಿ.

**4. ಹೆದ್ದಾರಿ ನಿರ್ಮಾಣ-** ನಗರ ಮತ್ತು ಗ್ರಾಮೀಣ ಪ್ರದೇಶಗಳು, ಆರ್ಥಿಕ ತತ್ವಗಳು: ರಸ್ತೆ ಮಾರ್ಗ ಮತ್ತು ರಸ್ತೆ ಬದಿಯ ಚರಂಡಿ ಮತ್ತು ಕೆಳ ಮಣ್ಣಿನ ಚರಂಡಿ ಮತ್ತು ಜಲಶಾಸ್ತ್ರ, ಜಲಶಾಸ್ತ್ರೀಯ ವಿನ್ಯಾಸ ತತ್ವಗಳು, ಚರಂಡಿ ರಚನೆಗಳು.

**5. ಹೆದ್ದಾರಿ ನಿರ್ಮಾಣ-** ನಿವೇಶನ ತೀರುವಳಿ, ರೋಡ್ ರೋಲರ್ ಗಳ ವಿಭಿನ್ನ ವಿಧಗಳು, ಮಣ್ಣು ತೆಗೆಯುವ ಸಲಕರಣೆ ಮತ್ತು ನಿರ್ಮಾಣ ಸಲಕರಣೆ, ಆಧುನಿಕ ಹೆದ್ದಾರಿ ನಿರ್ಮಾಣದ ಕಾಮಗಾರಿಗಳು, ಹೆದ್ದಾರಿಯ ಸಮರ್ಪಕತೆಗಾಗಿ ಮತ್ತು ನಿರ್ಮಾಣಕ್ಕಾಗಿ ನಿರ್ದಿಷ್ಟ ವಿವರಣೆಗಳು.

**6. ಹೆದ್ದಾರಿ ನಿರ್ವಹಣೆ-** ಹೆದ್ದಾರಿಯ ಮೇಲ್ಮೈ ನಿರ್ವಹಣೆ, ಅಕ್ಕಪಕ್ಕದ ಭಾಗ ಮತ್ತು ಸಂಪರ್ಕ ರಸ್ತೆಯ ನಿರ್ವಹಣೆ, ಹಿಮ ಮತ್ತು ಮಂಜಿನ ನಿಯಂತ್ರಣ, ಸೇತುವೆ ಹಾಗೂ ಅಡಿಗಾಲುವೆ ನಿರ್ವಹಣೆ ಇತ್ಯಾದಿ, ಸಂಚಾರಿ ಸೇವೆ ಮತ್ತು ನಿರ್ವಹಣಾ ವೆಚ್ಚ.

**ಸೇತುವೆಗಳು**

**1**. ವಿನ್ಯಾಸಕ್ಕಾಗಿ ಎಟಿಇ, ಜಲಾನಯನ ಪ್ರದೇಶದ ಜಲಶಾಸ್ತ್ರೀಯ ಪರೀಕ್ಷೆಗಳು, ಪ್ರಾಯೋಗಿಕ ಸೂತ್ರಗಳ ಮೂಲಕ ಸೇತುವೆ, ಜಲ ಮಾರ್ಗಗಳಿಗೆ ಸಂಬಂಧಿಸಿ ಪ್ರವಾಹ ಅಂದಾಜು, ತರ್ಕ ಸಮ್ಮತ ವಿಧಾನ, ನಿರೀಕ್ಷಿಸಬಹುದಾದ ವಿಧಾನ ಮತ್ತು ಘಟಕ ನಕ್ಷೆ ವಿಧಾನ.

**2**. ಡೆಕ್ (ಹಡಗು ಕಟ್ಟೆ) ಮತ್ತು ನೇರ ಸೇತುವೆಗಳಂತಹ ಸೇತುವೆಗಳ ವಿನ್ಯಾಸದ ಪ್ರಾಯೋಗಿಕ ನಿಯಮಗಳು ಮತ್ತು ಬಾಳಿಕೆಯ ಅವಧಿಯ ವಿಧಗಳು, ಬೌವ್‌ಸ್ಟ್ರಿಂಗ್ ತೂಗುಹಾಕುವಿಕೆ ಮತ್ತು ಚರ ಸೇತುವೆಗಳು.

**3**. ರೈಲ್ವೆ ಹಾಗೂ ಹೆದ್ದಾರಿ ಸೇತುವೆಗಳಿಗಾಗಿ ಸಮತಲ ಪ್ರದೇಶದ ವ್ಯವಸ್ಥೆಯ ವಿನ್ಯಾಸ ಮತ್ತು ಸಂಬಂಧಪಡುವ ನಿರ್ದಿಷ್ಟ ವಿವರಣೆಗಳ ವಿಭಿನ್ನ ವಿಧಗಳು.

**III ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್:-**

## ನೈರ್ಮಲ್ಯ ಇಂಜಿನಿಯರಿಂಗ್

**1. ಚರಂಡಿ ಮತ್ತು ಗ್ರಾಮಸಾರ ಚರಂಡಿ – ಯೋಜನಾ ಉದ್ದೇಶಗಳು** – ಮೇಲ್ಭಾಗದ ಚರಂಡಿ, ಭೂಮಿಯ ಒಳಗಿನ ಗ್ರಾಮಸಾರ ಚರಂಡಿ ವ್ಯವಸ್ಥೆಗಳು ಮತ್ತು ಬೇರೆ ಬೇರೆ ಕಾಮಗಾರಿಗಳ ಸಾಮಾನ್ಯ ವ್ಯವಸ್ಥೆ; ವಿನ್ಯಾಸ ತತ್ವಗಳು, ಸಂಗ್ರಹಿಸಬೇಕಾದ ದಿನಾಂಕ, ಮಳೆ ನೀರಿನ ಮಲೀನ ಭಾಗದ ಸೇರ್ಪಡೆಗಳಿಗಾಗಿ ಅನುಮತಿ, ಗಾತ್ರ, ಗ್ರಾಮಸಾರ ಚರಂಡಿಗಳ ವೇಗ, ಮತ್ತು ಇಳಿಕಲ್ಲಿನ ಪ್ರಮಾಣ ಸೂಕ್ತ ವ್ಯವಸ್ಥೆಯ ಆಯ್ಕೆ ಮತ್ತು ಯೋಜನೆಯ ಬೆಳವಣಿಗೆ ಗ್ರಾಮಸಾರ ಚರಂಡಿ ಮಾರ್ಗದ ಹಲವು ಅವಶ್ಯಕ ಕಾಮಗಾರಿಗಳ ವಿನ್ಯಾಸ.

2. **ಗೃಹ ಚರಂಡಿ ವ್ಯವಸ್ಥೆ:-** ಶೌಚಗೃಹಗಳು, ನಲ್ಲಿಗಳು, ಮಣ್ಣಿನ ಮತ್ತು ಇತರೆ ಪೈಪ್‌ಗಳು, ಮತ್ತು ರೊಚ್ಚು ಗುಂಡಿಗಳು, ಮೂತ್ರಾಲಯಗಳು ಮತ್ತು ಸಾನ್ನಗೃಹಗಳು.

3. **ಗ್ರಾಮಸಾರ ಚರಂಡಿ ಮಾರ್ಗ** – ಗ್ರಾಮಸಾರ ಚರಂಡಿಯ ಮೇಲ್ಮೈ ಸಂದು ಗಾರೆ ಮಾಡುವುದು ಮತ್ತು ಪರೀಕ್ಷಿಸುವುದು, ಇಳಿಗುಂಡಿಗಳ ನಿರ್ಮಾಣ, ನೀರು ಹರಿಸಿ ಸ್ವಚ್ಛಗೊಳಿಸುವ ಟ್ಯಾಂಕ್‌ಗಳು, ನದಿಗೆ ನೀರು ಹರಿದು ಸೇರುವಿಕೆಯ ತಡೆಗಳು, ಕ್ಯಾಚಬೇಸಿನ್ ಇನ್‌ರ್ವಟೆಡ್ ಸಿಫಾನ್ಸ್ ಮತ್ತು ಸಾರ್ವಜನಿಕ ಸೌಲಭ್ಯಗಳು, ಒಳಚರಂಡಿ ಮಾರ್ಗಗಳ ನಿರ್ವಹಣೆ.

**4. ಗ್ರಾಮಸಾರ ಚರಂಡಿಯ ಪಂಪಿಂಗ್ ವ್ಯವಸ್ಥೆ.-** ತ್ಯಾಜ್ಯಗಳನ್ನು ಹೊರಬಿಡುವುದಕ್ಕೆ ಮುಂಚೆ ಗ್ರಾಮಸಾರದ ನಿರ್ವಹಣೆ, ಗ್ರಾಮಸಾರದ ಗುಣಲಕ್ಷಣಗಳು, ವಿಸ್ತೃತ ಗಾಳಿ ಪ್ರಸರಿಸುವುದು ಮತ್ತು ಇತರೆ ಕಾರ್ಯಗಳು ಸೇರಿದಂತೆ ಆಧುನಿಕ ಸಂಸ್ಕರಣಾ ವಿಧಾನ. ಘನ ತ್ಯಾಜ್ಯದ ಶೇಖರಣೆ ಮತ್ತು ವಿಲೇವಾರಿ, ಮಿಶ್ರ ಗೊಬ್ಬರವನ್ನು ಪುಡಿ ಮಾಡುವ ವಿವಿಧ ವಿಧಾನಗಳನ್ನು ಪರಿಶೋಧಿಸುವುದು, ಉಪಯೋಗ ಮತ್ತು ವಿಲೇವಾರಿ.

**5. ಸಾರ್ವಜನಿಕ ಆರೋಗ್ಯ ನಿರ್ವಹಣೆಯ ಅಂಶಗಳು:** ಪಾಯಖಾನೆಗಳು, ಚರಂಡಿ, ತ್ಯಾಜ್ಯ ಸಂಗ್ರಹ ಮತ್ತು ವಿಲೇವಾರಿ, ಪ್ಲಂಬಿಂಗ್, ಆಹಾರ ಮತ್ತು ಹಾಲಿನ ನೈರ್ಮಲ್ಯ, ರೆಸ್ಟೋರೆಂಟ್‌ಗಳು, ಮಾರುಕಟ್ಟೆ ಸ್ಥಳಗಳು, ಕಸಾಯಿಖಾನೆಗಳು, ಸ್ಮಶಾನಗಳು, ಉದ್ಯಾನವನಗಳು, ಆಸ್ಪತ್ರೆಗಳು, ಆಟದ ಮೈದಾನಗಳು ಮತ್ತು ಚಲನಚಿತ್ರ ಹಾಲ್‌ಗಳು.

**6. ನಗರ ಯೋಜನೆಯ ಘಟಕಾಂಶಗಳು:** ವಸತಿ ನಿರ್ಮಾಣ, ವಲಯ, ಗಾಳಿ ಬೆಳಕು ಮತ್ತು ವಾಯು ಸಂಚಾರದ ಅಂಶಗಳು, ಧೂಳು ನಿಯಂತ್ರಣ, ಪರಿಸರ ಅಭಿವೃದ್ಧಿ, ಸ್ವಚ್ಛ ನಗರ, ಮಲೇರಿಯಾ ನಿಯಂತ್ರಣ, ನೊಣ ಮತ್ತು ದಂಶಕದ ನಿಯಂತ್ರಣ, ಗ್ರಾಮೀಣ ನೈರ್ಮಲ್ಯ, ಜಾತ್ರೆಗಳು ಮತ್ತು ಹಬ್ಬಗಳು ಮತ್ತು ರೋಗಾಣು ನಾಶ.

## <u>ನೀರು ಸರಬರಾಜು</u>

**7. ನೀರು ಸರಬರಾಜಿನ ಮೌಲ್ಯ ಮತ್ತು ಪ್ರಾಮುಖ್ಯತೆ:-** ಗೃಹಕೃತ್ಯ, ವಾಣಿಜ್ಯ ಮತ್ತು ಸಾರ್ವಜನಿಕ ಅಗತ್ಯತೆ. ಭವಿಷ್ಯದ ಜನಸಂಖ್ಯೆಗಾಗಿ ಲಭ್ಯತೆ ಬೇಡಿಕೆಯಲ್ಲಿ ಏರಿಳಿತ.

**8. ನೀರಿನ ಪ್ರಮಾಣ:-** ಒಂದು ಪಟ್ಟಣ ಅಥವಾ ನಗರಕ್ಕೆ ಬೇಕಾಗಿರುವ ನೀರಿನ ಪ್ರಮಾಣದ ಅಂದಾಜು, ವಿವಿಧ ಮಾರ್ಪಾಡುಗಳನ್ನು ಪರಿಗಣಿಸಿ ತಲಾವಾರು ಬಳಕೆಯನ್ನು ಬಾಧಿಸುವ ವಿವಿಧ ಮಾರ್ಪಾಡಿತ ಸಂಬಂಧಿಸಿದ ಪ್ರಭಾವಗಳು, ಒಂದು ಮೂಲದಿಂದ (ಮಳೆ ಮತ್ತು ಜಲಾನಯನಗಳಿಂದ ಮೇಲ್ಮೈ ನೀರು ಮತ್ತು ಪಂಪಿಂಗ್ ಮತ್ತು ಇತರೆ ವಿಧಾನಗಳಿಂದ ಅಂತರ್ಜಲ ನೀರು) ಲಭ್ಯವಿರುವ ನೀರಿನ ಪ್ರಮಾಣದ ಅಂದಾಜು, ಮೂಲಗಳು ತಡೆಗಟ್ಟಿದ ನೀರು, ನಿರಂತರ ನೀರಿರುವ ಹಳ್ಳಗಳು, ಬುಗ್ಗೆ ಬಾವಿಗಳು, ಆಳವಿಲ್ಲದ ಬಾವಿಗಳು, ಆಳವಾದ ಬಾವಿಗಳು ಮತ್ತು ಒಳಹರಿವು ಗ್ಯಾಲರಿಗಳು.

**9. ನೀರಿನ ಗುಣಮಟ್ಟ:-** ಮಾಲಿನ್ಯ, ಕಲುಷಿತ ಮತ್ತು ಸೋಂಕಿತ, ಮತ್ತು ನೀರಿನ ಮೂಲಕ ಹರಡುವ ರೋಗಗಳು, ನೈರ್ಮಲೀಕರಣ ಸಮೀಕ್ಷೆ, ಜಲಾನಯನಗಳು ಮತ್ತು ಜಲಾನಯನ ಪ್ರದೇಶದ ಸಂರಕ್ಷಣೆ, ನೀರಿನ ವಿಶ್ಲೇಷಣೆ, ಭೌತಿಕ ಬ್ಯಾಕ್ಟೀರಿಯಾ ರಾಸಾಯನಿಕ ಮತ್ತು ಮೈಕ್ರೋಸ್ಕೋಪಿಕ್, ನೀರು ಸರಬರಾಜು ಸಂರಕ್ಷಣೆ – ಪಾಚಿ ನಿಯಂತ್ರಣ, ನದಿ ಮಾಲಿನ್ಯ ಮತ್ತು ಅದರ ನಿಯಂತ್ರಣ, ನೀರಿನ ಶುದ್ಧತೆ, ಪಿ.ಎಚ್ ಮೌಲ್ಯ.

**10. ಜಲಾಗಾರಗಳ ರಚನೆ:–** ಮಿತವ್ಯಯದ ಸಾಮಾನ್ಯ ತತ್ವಗಳು, ಬೇರೆ ಬೇರೆ ಮೂಲಗಳಿಗೆ ನೀರನ್ನು ಒಳಬಿಡುವ ಕಾಮಗಾರಿಗಳ ವಿವಿಧ ವಿಧಗಳ ರಚನೆ ಮತ್ತು ವ್ಯವಸ್ಥೆ.

**11. ನೀರಿನ ಶುದ್ಧೀಕರಣ:–** ಮಾಲಿನ್ಯಕಾರಕಗಳ ಅಧ್ಯಯನ (ತೇಲಾಡುತ್ತಿರುವ, ಕರಗಿಹೋಗುವ ಮತ್ತು ಕಲಿಲ) ಸರಳ ಗಸಿ ಶೇಖರಣೆ, ಹೆಪ್ಪುಗಟ್ಟುವಿಕೆಯಿಂದ ಗಸಿ ಶೇಖರಣೆ, ಹೆಪ್ಪುಕಾರಕಗಳ ವಿಧಗಳು ಮತ್ತು ಅವುಗಳ ಉಪಯೋಗಗಳು, ನಿಧಾನವಾದ ಮತ್ತು ವೇಗವಾದ ಸೋಸುವಿಕೆ, ಒತ್ತಡ ಮತ್ತು ಇತರೆ ಸೋಸುವಿಕೆಗಳು, ಕ್ರಿಮಿ ಶುದ್ಧೀಕರಣದ ಆಧುನಿಕ ವಿಧಾನಗಳು ಮತ್ತು ಕೈಗಾರಿಕಾ ಉಪಯೋಗಕ್ಕಾಗಿ ನೀರಿನ ಶುದ್ಧೀಕರಣದ ವಿವಿಧ ವಿಧಾನಗಳು.

**12. ಪಂಪಿಂಗ್ ಮತ್ತು ವಿತರಣಾ ವ್ಯವಸ್ಥೆ:-** ಸರಬರಾಜು ವ್ಯವಸ್ಥೆ, ಪೈಪ್‌ಲೈನ್‌ಗಳು ಮತ್ತು ಚರಂಡಿ ಕೊಳವೆಗಳ ನಿರ್ಮಾಣ, ಪಂಪಿಂಗ್ ಯಂತ್ರಗಳು, ಸೇತುವೆಗಳು, ಜಲಾಶಯಗಳು, ಬೀಚಿಂಗ್ ಜಲಾಶಯಗಳು, ನಿಲುವು ಪೈಪ್‌ಗಳು ಮತ್ತು ನೀರಿನ ಟವರ್ ಗಳು, ವಿತರಣಾ ವ್ಯವಸ್ಥೆ (ಗ್ರಿಡ್ ಐರನ್, ಡೆಡ್-ಎಂಡ್ ಮತ್ತು ರಿಂಗ್ ಸಿಸ್ಟಮ್) ಕವಾಟಗಳು, ಹೈಡ್ರಾಂಟ್, ದರ ನಿಯಂತ್ರಕಗಳು ಮತ್ತು ಮೀಟರ್ ಗಳು, ಎಕ್ಸ್ ಪಾನ್ಷನ್‌ಜಾಯಿಂಟ್ಸ್, ಮ್ಯಾನ್‌ಹೋಲ್‌ಗಳು, ವಿತರಣಾ ವ್ಯವಸ್ಥೆಯ ವಿನ್ಯಾಸದಲ್ಲಿ ಅನುಸರಿಸಬೇಕಾದ ತತ್ವಗಳು, ನಿರ್ವಹಣೆ ಮತ್ತು ದುರಸ್ತಿಗಳು, ಸೋರಿಕೆಗಳನ್ನು ಪತ್ತೆ ಹಚ್ಚುವುದು, ತ್ಯಾಜ್ಯವನ್ನು ತಡೆಗಟ್ಟುವುದು.

## IV ನಿರ್ಮಾಣ ತಂತ್ರಜ್ಞಾನ ಮತ್ತು ನಿರ್ವಹಣೆ:

1. ನಿರ್ಮಾಣದಲ್ಲಿನ ಪರಿಮಾಣಾತ್ಮಕ ವಿಧಾನಗಳು.
2. ನಿರ್ಮಾಣ, ಯೋಜನೆ ಮತ್ತು ನಿಯಂತ್ರಣ
3. ನಿರ್ಮಾಣ ಸಾಮಗ್ರಿಗಳಲ್ಲಿ ಮುಂಗಡಗಳು
4. ವಿಪತ್ತು ಪೀಡಿತ ಪ್ರದೇಶಗಳಲ್ಲಿ ನಿರ್ಮಾಣ
5. ರಚನೆಗಳ ಪುನರ್ವಸತಿ

6. ನಿರ್ಮಾಣ ಆರ್ಥಿಕತೆ ಮತ್ತು ಹಣಕಾಸು

7. ನಿರ್ಮಾಣ ನಿರ್ವಹಣೆ ಮತ್ತು ಕಂಪ್ಯೂಟರ್ ಅನ್ವಯ

8. ನಿರ್ಮಾಣದಲ್ಲಿ ಯಾಂತ್ರಿಕ ವ್ಯವಸ್ಥೆ

9. ನಿರ್ಮಾಣವನ್ನು ನಿಯಂತ್ರಿಸುವ ರಾಜ್ಯ ಕಾನೂನುಗಳು

## <u>ಐಚ್ಛಿಕ ವಿಷಯಗಳು (ಭಾಗ-ಬಿ)</u>

### I <u>ಪ್ರೌಢ ರಚನೆಗಳು:-</u>

1. ಸಂಯುಕ್ತ ಒತ್ತಡ ಮತ್ತು ಸೀಳುಗಳು, ಮೋಹರ್ನ್ ವೃತ್ತ ಮತ್ತು ಅದರ ಅನ್ವಯ, ಸಂಯುಕ್ತ ಸೀಳುಗಳು, ಪ್ರಧಾನ ಸೀಳುಗಳು, ಭೌಗೋಳಿಕ ಪರಿಹಾರಗಳು.

2. ವಸ್ತುಗಳ ಯಾಂತ್ರಿಕ ಗುಣಲಕ್ಷಣಗಳ ಮೇಲೆ ತಾಪಮಾನದ ಪರಿಣಾಮಗಳು.

3. ಸ್ಥಿತಿ ಸ್ಥಾಪಕತ್ವ ವಿಫಲತೆಯ ಸಿದ್ಧಾಂತಗಳು.

4. ಸೀಳು ಶಕ್ತಿಯ ವಿಧಾನಗಳು- ಸರಳ ಕಿರಣಗಳು ಮತ್ತು ಟ್ರುಸಸ್‌ಗಳಿಗೆ ಅನ್ವಯಿಸುವ ಸರಳ ಟ್ರುಸಸ್‌ಗಳ ಸೀಳಿನ ಪ್ರತಿಯೊಂದು ವಿಧಾನಗಳ ವಿಚಲನೆ.

5. ಕ್ಯಾಸ್ಟಿಗ್ಲಿಯೋನ್ಸ್ ಪ್ರಮೇಯ I ಮತ್ತು ಸರಳ ಸಂದರ್ಭಗಳಲ್ಲಿ ಅದರ ಅನ್ವಯ.

6. ನಿರಂತರ ಕಿರಣಗಳ ವಿಶ್ಲೇಷಣೆ, ಊರೆಗಂಬದ ಚಾಚು ರಚನೆ, ಗುರುತಿಸಿದ ಕಿರಣಗಳು, ಇಳಿಜಾರಿನ ವಿಚಲನೆಯ ಸಮೀಕರಣಗಳು (ಇಳಿಜಾರು ವಿಚಲನ) ಮತ್ತು ಮಹತ್ವದ ವಿತರಣೆ.

7. ಮೂರು ಹಿಂಜ್ಡ್ ಆರ್ಚ್ಸ್, ಡೆಡ್ ಲೈವ್ ಲೋಡ್‌ಸ್‌ಗಳಲ್ಲಿ ಹಿಂಜ್ಡ್ ಆರ್ಚ್ಸ್ ಮುಖಾಂತರ ಪ್ರತಿರೋಧ ಮಾರ್ಗಗಳು, ಸಮತಲ ಥ್ರುಸ್ಟ್‌ಗಾಗಿ ಪ್ರಭಾವಿ ರೇಖೆಗಳು ಮತ್ತು ಬೆಂಡಿಂಗ್ ಮೊಮೆಂಟ್ ರಿಯಾಕ್ಷನ್ ಲೋಕಸ್.

8. ರೋಲಿಂಗ್ ಲೋಡ್‌ಗಳು – ಗರಿಷ್ಠ ಬೆಡಿಂಗ್ ಮೊಮೆಂಟ್‌ಗಳ ಕರ್ವ್ಸ್ ಮತ್ತು ಗರಿಷ್ಠ ಶೀರ್ ಫೋರ್ಸ್‌ಗಳು, ಸುತ್ತುವರಿದ ಪ್ಯಾರಾಬೋಲ ಮತ್ತು ಲೋಡಿಂಗ್‌ನ ವಿಭಿನ್ನ ವ್ಯವಸ್ಥೆಯಲ್ಲಿ ಸಮಾನ ಏಕ ರೂಪವಾಗಿ ಹರಡಿರುವ ಹೊರೆ.

9. ಇನ್‌ಫ್ಲುಯೆನ್ಸ್ ಲೈನ್ಸ್ ಆಫ್ ರಿಯಾಕ್ಷನ್, ಒತ್ತಡದ ಬಲ, ಬಾಗುವಿಕೆ, ವಿಚಲನೆ, ಲೈನ್ ಲೋಡ್ ಅಡಿಯಲ್ಲಿ ಒತ್ತಡದ ವ್ಯತಿರಿಕ್ತತೆ, ವಿಲಿಟ್ ಮೊಹ್ರಸ್‌ನ ರೇಖಾಚಿತ್ರ.

10. ಫಾಲಿಂಗ್ ಲೋಡ್‌ಗಳು - ಇನ್‌ಫ್ಲುಯೆನ್ಸ್ ಲೈನ್‌ಗಳ ಕಾರಣದಿಂದಾಗಿ ಫ್ರೇಮ್‌ಗಳ ಮೆಂಬರ್ ಗಳಲ್ಲಿ ಒತ್ತಡದ ನಿರ್ಧರಣೆ.

## II ಮುನ್ನೊತ್ತಡದಿಂದ ಬಲಪಡಿಸಿದ ಕಾಂಕ್ರೀಟ್:-

**1.** ಹೆಚ್ಚಿನ ಸಾಮರ್ಥ್ಯದ ಕಾಂಕ್ರೀಟ್ ಮತ್ತು ಸ್ಟೀಲ್ ಬಾರ್ ಗಳು ಮತ್ತು ತಂತಿಗಳ ತಂತ್ರಜ್ಞಾನ, ವಿನ್ಯಾಸದ ತತ್ವಗಳು, ವಿವಿಧ ವಿನ್ಯಾಸ ವಿಧಾನಗಳ ಪುನರವಲೋಕನ, ನಿರಂತರ ಕಿರಣಗಳ ಸ್ಥಿತಿಸ್ಥಾಪಕತ್ವ ಮತ್ತು ಅಂತಿಮ ವಿನ್ಯಾಸ, ಪ್ಲಾಟ್‌ನ ಸ್ಲಾಬ್‌ಗಳು.

**2.** ಅನಿರ್ದಿಷ್ಟ ಮುನ್ನೊತ್ತಡದಿಂದ ಬಲಪಡಿಸಿದ ಕಾಂಕ್ರೀಟ್ ರಚನೆ-ಲಾನ್ ಸ್ಪ್ಯಾನ್ ಸೇತುವೆಗಳ ವಿನ್ಯಾಸದಿಂದ ಮುನ್ನೊತ್ತಡದಿಂದ ಬಲಪಡಿಸಿದ ಕಾಂಕ್ರೀಟ್.

**3.** ಸಿದ್ಧಾಂತಗಳು-ಬಾಂಡ್, ಕ್ರೀಪ್ ಮತ್ತು ಇತರೆ ಸಂಬಂಧಿತ ವಿದ್ಯಮಾನಗಳು.

**4.** ಆಧಾರ ವಲಯದ ಒತ್ತಡದ ವಿಶ್ಲೇಷಣೆ.

## III ಉನ್ನತ ದರ್ಜೆಯ ಮಣ್ಣು ಅಧ್ಯಯನ:-

**1.** ಮಣ್ಣಿನ ಘಟಕಗಳ ವ್ಯಾಖ್ಯಾನ-ಮಣ್ಣಿನ ಗುರುತಿಸುವಿಕೆ ಮತ್ತು ವರ್ಗೀಕರಣ, ಮಣ್ಣಿನಲ್ಲಿ ಘನ-ನೀರು ಅನಿಲದ ಸ್ಥಿತಿಗಳು ಮತ್ತು ಮೂಲಭೂತ ಸಂಬಂಧಗಳು, ಮಣ್ಣಿನ ರಚನೆ ಮತ್ತು ತೈಲ ರಚನೆಯ ಮಹತ್ವ, ಭೌತ-ರಾಸಾಯನಿಕ ವಿಧಾನಗಳು.

**2.** ಮಣ್ಣಿನ ಮೂಲಕ ನೀರಿನ ಹರಿವು – ಡ್ರಾಯ್'ನ ಸಹ-ಪರಿಣಾಮದ ಪರಿಕಲ್ಪನೆ, ಪ್ರವೇಶ ಸಾಧ್ಯತೆ ಮತ್ತು ಅದರ ಮಾಪನ, ಲೋಮನಾಳ ಕ್ರಿಯೆಯ ವಿದ್ಯಮಾನಗಳು, ಮಣ್ಣಿನ ಕುಗ್ಗುವಿಕೆ ಮತ್ತು ಹಿಗ್ಗುವಿಕೆ ಕ್ರಿಯೆ, ಒಳಚರಂಡಿ.

**3**. ಮಣ್ಣಿನ ಸ್ಥಿರತೆ ಮತ್ತು ಪ್ಲಾಸ್ಟಿಸಿಟಿ: ಮಣ್ಣಿನ ನಿರ್ವಹಣಾ ಅವಶ್ಯಕತೆಗಳು – ಮಣ್ಣಿನ ವರ್ಗೀಕರಣ, ಸಾಂದ್ರತೆ ಮತ್ತು ಮೂಲ ಅಂಶಗಳು.

**4.** ಮಣ್ಣುಗಳ ಸಂಕುಚಿತತೆ-ಸಂಪರ್ಕ ಒತ್ತಡ ಮತ್ತು ಉಪ-ದರ್ಜೆಯ ಸಂಬಂಧ, ಕಣಕಣದ ಮತ್ತು ಒಗ್ಗೂಡಿಸುವ ಮಣ್ಣಿನ ಶಕ್ತಿ ಸಿದ್ಧಾಂತಗಳು, ಮತ್ತು ಸಂಬಂಧಿತ ಪರೀಕ್ಷೆಗಳಿಗೆ ಉಪಯೋಗಿಸುವಿಕೆಯ ಪ್ರಾಯೋಗಿಕ ಸಮಸ್ಯೆಗಳು.

**5.** ಸಕ್ರಿಯ ಮತ್ತು ನಿಷ್ಕ್ರಿಯ ಭೂಮಿಯ ಒತ್ತಡ-ಅಧಿಕ ಸರ್ ಚಾರ್ಜ್‌ನ ಪರಿಣಾಮಗಳು, ಸುರಂಗಮಾರ್ಗ ಮತ್ತು ಸಾಫ್ಟ್ ಲೈನಿಂಗ್‌ನಲ್ಲಿ ಭೂಮಿಯ ಒತ್ತಡದ ಸಿದ್ಧಾಂತಗಳು, ಧಾರಣ ಸಾಮರ್ಥ್ಯ, ಧಾರಣ ಸಾಮರ್ಥ್ಯದ ಸರಾಸರಿ ಸಿದ್ಧಾಂತಗಳ ಒಯ್ಯುವಿಕೆ ಸಾಮರ್ಥ್ಯ, ವಿನ್ಯಾಸ ಪರಿಶೀಲನೆಗಳು, ವಿನ್ಯಾಸ ಕಾರ್ಯವಿಧಾನಗಳ ಮೌಲ್ಯಮಾಪನ, ನಿರ್ಮಾಣದ ಕೋಡ್‌ಗಳು – ಲೋಡ್ ಪರೀಕ್ಷೆಗಳು, ಸೆಟಲ್ ಮೆಂಟ್‌ಗಳ ವಿಶ್ಲೇಷಣೆ.

**6.** ಭೂ ಕುಸಿತ ಮತ್ತು ಸಂಬಂಧಿತ ವಿದ್ಯಮಾನಗಳು, ಇಳಿಜಾರುಗಳು ಮತ್ತು ಕಟ್‌ಗಳ ಸ್ಥಿರತೆ, ಅಡ್ಡ ಹಲಗೆಗಳು ಮತ್ತು ತಗಡಿನ ರಾಶಿಗಳು, ಸ್ಥಿರತೆಯ ವಿಶ್ಲೇಷಣೆಯ ವಿಧಾನಗಳು ಮತ್ತು ಒತ್ತಡದ ನಿಯತಾಂಕಗಳ ಆಯ್ಕೆ, ಅಂತರ್ಜಲ ಹರಿವಿನ ಸಮಸ್ಯೆಗಳು, ಮೂಲ ಭೇದಾತ್ಮಕ ಸಮೀಕರಣಗಳು, ಕ್ಯೂ-ಆಫ್‌ಗಳು, ಫಿಲ್ಟರ್ ಗಳು ಮತ್ತು ಬೀಮ್‌ಗಳ ಪೈಪಿಂಗ್ ಪರಿಣಾಮಗಳ ವ್ಯವಸ್ಥೆ.

**IV ಹೆದ್ದಾರಿಯ ನಿರ್ವಹಣೆ:-**

1. **ಸಾಮಾನ್ಯ** – ಹೆದ್ದಾರಿ ಅಭಿವೃದ್ಧಿಯ ಪ್ರಾಮುಖ್ಯತೆ, ಹೆದ್ದಾರಿ ಆರ್ಥಿಕತೆ ಮತ್ತು ಹೆದ್ದಾರಿ ಹಣಕಾಸು ಮತ್ತು ಹೆದ್ದಾರಿ ವ್ಯವಸ್ಥೆಗಳು.

2. **ಸಮೀಕ್ಷೆಗಳು-** ಹೆದ್ದಾರಿ ಯೋಜನಾ ಸಮೀಕ್ಷೆಗಳು, ಸ್ಥಳ ಸಮೀಕ್ಷೆಗಳು ಮತ್ತು ಮಣ್ಣಿನ ಸಮೀಕ್ಷೆಗಳು, ನಕ್ಷೆಗಳು ಮತ್ತು ಕೋಷ್ಟಕಗಳ (ನಗರ ಮತ್ತು ಗ್ರಾಮೀಣ ಪ್ರದೇಶಗಳು) ರೂಪದಲ್ಲಿ ದತ್ತಾಂಶ ಸಲ್ಲಿಕೆ, ಹೆದ್ದಾರಿ ಯೋಜನೆಗಳು ಮತ್ತು ವಿಶಿಷ್ಟ ವಿವರಣೆಗಳು.

**3. ಹೆದ್ದಾರಿ ವಿನ್ಯಾಸ-** ಭೌಗೋಳಿಕ ವಿನ್ಯಾಸ- ದಾರಿಯ ಹಕ್ಕುಗಳು, (ರೈಟ್ಸ್ ಆಫ್ ವೇ) ಹೆದ್ದಾರಿ ಸಾಮರ್ಥ್ಯ, ಉದ್ದೇಶಿತ ವೇಗ, ಕ್ರಾಸ್ ಸೆಕ್ಷನ್ ಸೈಟ್ ಡಿಸೈಕ್ಷನ್, (ರಸ್ತೆಯ ಅಡ್ಡಸೀಳು ನೋಟ ಮತ್ತು ಅಂತರ ವಿನ್ಯಾಸ), ಗ್ರೇಡ್ ಲೈನುಗಳು, ರಸ್ತೆಯ ತಳ ನಕಾಸೆ, ದಾರಿಯ ನಿರ್ಮಾಣ, ಅಂತರ್ ವಿಭಾಗಗಳು ಮತ್ತು ಆಂತರಿಕ ಬದಲಾವಣೆಗಳು, ಗ್ರೇಡ್ ಸೆಪರೇಟರ್ಸ್‌ಗಳು, ರೋಟರಿ ಅಂತರ್ ವಿಭಾಗಗಳು ಇತ್ಯಾದಿ.

**4. ಹೆದ್ದಾರಿ ಚರಂಡಿ-** ನಗರ ಮತ್ತು ಗ್ರಾಮೀಣ ಪ್ರದೇಶಗಳು, ಆರ್ಥಿಕ ತತ್ವಗಳು: ರಸ್ತೆ ಮಾರ್ಗ ಮತ್ತು ರಸ್ತೆ ಬದಿಯ ಚರಂಡಿ ಮತ್ತು ಕೆಳ ಮಣ್ಣಿನ ಚರಂಡಿ ಮತ್ತು ಜಲಶಾಸ್ತ್ರ, ಜಲಶಾಸ್ತ್ರೀಯ ವಿನ್ಯಾಸ ತತ್ವಗಳು, ಚರಂಡಿ ವ್ಯವಸ್ಥೆಗಳು.

**5. ಹೆದ್ದಾರಿ ನಿರ್ಮಾಣ-** ನಿವೇಶನ ತೀರುವಳಿ, ರೋಡ್ ರೋಲರ್ ಗಳ ವಿಭಿನ್ನ ವಿಧಗಳು, ಮಣ್ಣು ತೆಗೆಯುವ ಸಲಕರಣೆ ಮತ್ತು ನಿರ್ಮಾಣ ಸಲಕರಣೆ, ಆಧುನಿಕ ಹೆದ್ದಾರಿ ನಿರ್ಮಾಣದ ಕಾಮಗಾರಿಗಳು, ಹೆದ್ದಾರಿಯ ಸಾಮಗ್ರಿಗಳಿಗಾಗಿ ಮತ್ತು ನಿರ್ಮಾಣಕ್ಕಾಗಿ ನಿರ್ದಿಷ್ಟ ವಿವರಣೆಗಳು.

**6. ಹೆದ್ದಾರಿ ನಿರ್ವಹಣೆ-** ಹೆದ್ದಾರಿಯ ಮೇಲ್ಮೈ ನಿರ್ವಹಣೆ, ಅಕ್ಕಪಕ್ಕದ ಭಾಗ ಮತ್ತು ಸಂಪರ್ಕ ರಸ್ತೆಯ ನಿರ್ವಹಣೆ, ಹಿಮ ಮತ್ತು ಮಂಜಿನ ನಿಯಂತ್ರಣ, ಸೇತುವೆ ಹಾಗೂ ಅಡಿಗಾಲುವೆ ನಿರ್ವಹಣೆ ಇತ್ಯಾದಿ, ಸಂಚಾರಿ ಸೇವೆ ಮತ್ತು ನಿರ್ವಹಣಾ ವೆಚ್ಚ.

**ಹೈಡ್ರಾಲಿಕ್ಸ್ ಮತ್ತು ಅಣೆಕಟ್ಟುಗಳು:-**

**1**. ದ್ರವ ಚಲನೆಯ ಸಾಮಾನ್ಯ ಸಮೀಕರಣ, ಜಲಶಾಸ್ತ್ರೀಯ ರಚನೆಗಳಿಗೆ ಅನ್ವಯಿಸುವ ಸಂಭಾವ್ಯ ಹರಿವು ಮಾಪಕದ ಯಥಾನುರೂಪವಾದ ರೇಖಾ ಚಿತ್ರ, ನಾಲೆಗಳಲ್ಲಿ ಸೀದಾ ಹರಿಯುವ ಮತ್ತು ಕ್ರಮ ರಹಿತವಾಗಿ ಚಲಿಸುವ ಚಲನೆ, ಗಡಿ ಸ್ತರದ ವಿದ್ಯಮಾನಗಳು, ಕ್ರಮ ರಹಿತವಾಗಿ ಚಲಿಸುವ ದ್ರವ ವಸ್ತು ಮತ್ತು ಜೋರಾಗಿ ಹರಿಯುವ ಸಮತಟ್ಟಾದ ಮೇಲ್ಮೈ, ಸರ್ಕ್ಯೂಲರ್ ಸಿಲಿಂಡರ್ ಗಳು ಮತ್ತು ಗೋಲಗಳು.

**2.** ತೆರೆದ ಕಾಲುವೆಗಳಲ್ಲಿ ಸ್ಥಿರವಾದ ಮತ್ತು ಅಸ್ಥಿರವಾದ ಹರಿವು, ಸ್ವಾಭಾವಿಕವಾದ ಹಿನ್ನೀರಿನ ತಿರುವುಗಳು ಮತ್ತು ಕೃತಕ ಕಾಲುವೆಗಳು, ಹೈಡ್ರಾಲಿಕ್ ಜಂಪ್, ಉಬ್ಬರಗಳು ಮತ್ತು ಅಲೆಗಳು, ತುಂಬಿ ತುಳುಕುವ ಅಧಿಕ್ರಾಂತಿಕ ಹರಿವು, ಹರಿಯದೆ ನಿಂತಿರುವ ಅಲೆಗಳು, ಕೆಸರು ಸಾಗಣೆ.

3. ಮಣ್ಣಿನ ಒಡ್ಡುಗಳ ವಿನ್ಯಾಸದ ವಿವರಗಳು, ಯೋಜನೆಗಳ ಸುಸ್ಥಿರತೆಯ ತನಿಖೆ, ಇತರೆ ಹೈಡ್ರಾಲಿಕ್ ರಚನೆಗಳ ವಿನ್ಯಾಸಗಳ ವಿಶೇಷ ಲಕ್ಷಣಗಳು.

4. ಗಾರೆಯಿಂದ ನಿರ್ಮಿಸಿದ ಅಣೆಕಟ್ಟುಗಳ ವಿನ್ಯಾಸದ ವಿವರಗಳು (ವಿವಿಧ ವಿಧಾನಗಳು).

## VI ಜಲಶಾಸ್ತ್ರ (ಹೈಡ್ರಾಲಜಿ)

1. ಜಲಶಾಸ್ತ್ರೀಯ ವರ್ತುಲ, ಪ್ರಾಥಮಿಕ ದತ್ತಾಂಶ, ಹೈಡ್ರಾಲಿಕ್ ದತ್ತಾಂಶದ ಮೂಲಗಳು, ಜಲಶಾಸ್ತ್ರೀಯ ವೈಪಲ್ಯಗಳು.

2. ಜಲರಾಶಿಯ ನಕ್ಷೆ, ಅಂತರ್ಜಲ ಮತ್ತು ಮಣ್ಣಿನ ತೇವಾಂಶದ ಜಲಶಾಸ್ತ್ರೀಯ ವಿಶ್ಲೇಷಣೆ, ಹರಿದು ಹೋಗುವ ಮತ್ತು ಹರಿದು ಹೋಗುವಿಕೆಯ ಮೇಲೆ ಪರಿಣಾಮ ಬೀರುವ ಅಂಶಗಳು, ಪ್ರವಾಹದ ಹರಿವಿನ ದಾಖಲೆಗಳು.

3. ಮಳೆ ಬೀಳುವಿಕೆ: ವಿಧಗಳು, ಮಳೆಯ ಮಾಪನ, ಮಳೆ ಬೀಳುವಿಕೆಯ ದಾಖಲೆ, ಚಂಡಮಾರುತದ ಆವರ್ತಕ ಮತ್ತು ಸರಾಸರಿ ಮಾಹಿತಿಯ ದಾಖಲೆ ವಾರ್ಷಿಕ ಮಳೆಯ ಪ್ರಮಾಣ.

4. ನೀರಿನ ನಷ್ಟ: ಆವಿಯಾಗುವಿಕೆ ಮತ್ತು ಶೋಧನೆ ನಷ್ಟಗಳು, ಉತ್ಸರ್ಜನ ನಷ್ಟಗಳು/ಸೋಲಿ ಆವಿಯಾಗುವಿಕೆ, ಜಲಾನಯನ ಪ್ರದೇಶದಲ್ಲಿ ಸೋರಿಕೆ.

5. ಶುಷ್ಕ, ಅರೆ ಶುಷ್ಕ/ಬತ್ತಿದ ಪ್ರದೇಶಗಳ (ನಿರ್ದಿಷ್ಟವಾಗಿ ಭಾರತಕ್ಕೆ ಸಂಬಂಧಿಸಿದಂತೆ)

6. ಹಿಮ ಮತ್ತು ಪ್ರವಾಹ:- ವಿತರಣೆ, ಕಾರ್ಯ ಮತ್ತು ರಚನೆ, ನಿಯಂತ್ರಣ, ಕಾರಣ, ವಿತರಣೆಯ ವಿಧಾನಗಳು ಮತ್ತು ಪ್ರವಾಹಗಳ ನಿಯಂತ್ರಣ.

## VII. ಸ್ಥಿತಿಸ್ಥಾಪಕತ್ವದ ಸಿದ್ಧಾಂತ:-

ಒತ್ತಡ ಮತ್ತು ಭಾರದ ಅಂಶಗಳು, ಹೂಕರ್ಸ್‌ನ ಸಿದ್ಧಾಂತ, ವ್ಯತ್ಯಾಸಾತ್ಮಕ ದೋಷಗಳ ಭೇದಾತ್ಮಕ ಸಮೀಕರಣ, ಸಮೀಕರಣಗಳ ಹೊಂದಾಣಿಕೆ, ಒತ್ತಡದ ಕಾರ್ಯ, ಆಯತಾಕಾರದ ನಿರ್ದೇಶಾಂಕಗಳಲ್ಲಿ ಎರಡು ಆಯಾಮದ ಸಮಸ್ಯೆಗಳು. ಎಸ್.ಟಿ. ವೇನಂಟ್ಸ್‌ನ ತತ್ವ, ಒಂದು ತುದಿಯಲ್ಲಿ ಲೋಡ್ ಮಾಡಲಾದ ಕ್ಯಾಂಟಿಲಿವರ್ನ ಬಾಗುವಿಕೆ, ಕಿರಣಗಳ ವಿಚಲನ, ಧ್ರುವೀಯ ನಿರ್ದೇಶಾಂಕಗಳಲ್ಲಿ ಎರಡು ಆಯಾಮದ ಸಮಸ್ಯೆಗಳು.

**VIII. ಮೂಲ ಎಲೆಕ್ಟ್ರಾನಿಕ್ಸ್:-**

**1.** ಹೆಚ್ಚಿನ ನಿರ್ವಾತ ಟ್ಯೂಬ್‌ಗಳು-ಎಲೆಕ್ಟ್ರಾನ್ ಟ್ಯೂಬ್‌ಗಳ ಮೂಲಭೂತ ಗುಣಲಕ್ಷಣಗಳು, ಥರ್ಮಿಯೋನಿಕ್ ಹೊರಸೂಸುವಿಕೆ ಮತ್ತು ಹೊರಸೂಸುವಿಕೆಯ ಇತರ ವಿಧಗಳು, ಡಯೋಡ್-ಅದರ ಗುಣಲಕ್ಷಣಗಳು, ಡಯೋಡ್-ಅದರ ಗುಣಲಕ್ಷಣಗಳು, ರಿಕ್ಟಿಫೈಸ್ ಆಗಿ ಡಯೋಡ್ ಸ್ಪೇಸ್ ಚಾರ್ಜ್, ಗ್ರಿಡ್ ಕ್ರಿಯೆ, ಟ್ರಯೋಡ್, ಟ್ರೂಟರ್ ಮತ್ತು ಪೆಂಟೋಡ್ ಅದರ ಗುಣಲಕ್ಷಣಗಳು, ಬೀಮ್ ಟ್ಯೂಬ್‌ಗಳು ಮತ್ತು ರಿಮೋಟ್ ಕ್ಯೂ ಆಫ್ ಟ್ಯೂಬ್‌ಗಳು.

**2**. ಕ್ಯಾಥೋಡ್ ತಾಪಕ್ಕಾಗಿ ವಿದ್ಯುತ್ ಸರಬರಾಜು ವ್ಯವಸ್ಥೆ, ಆ್ಯನೋಡ್ ಪವರ್ ಗ್ರಿಡ್ ಬಯಾಸ್ ಪೂರೈಕೆ ರೆಕ್ಟಿಫೈಯರ್ ಸರ್ಕ್ಯೂಟ್‌ಗಳು ಮತ್ತು ಫಿಲ್ಟರ್ ಗಳು,

**3**. ವ್ಯಾಕ್ಯೂಮ್ ಟ್ಯೂಬ್ಸ್ ಗಳ ಆ್ಯಂಪ್ಲಿ ಫೈಯರ್ಸ್: ಟ್ರಯೋಡ್‌ನ ಒಂದು ಆ್ಯಂಪ್ಲಿ ಫೈಯರ್ ಮತ್ತು ಅದರ ಸಮಾನಾಂತರ ಸರ್ಕ್ಯೂಟ್, ಇಂಟರ್ ಸ್ಟೇಜ್ ಕಂಪ್ಲಿಂಗ್ಸ್, ರೆಸಿಸ್ಟೆನ್ಸ್ ಕೆಪಾಸಿಟೆನ್ಸ್, (ಕಾಪ್ಲೆಡ್,) ಟ್ರ್ಯಾನ್ಸ್‌ಫಾರ್ಮರ್-ಕಪಲ್ಡ್ ಮತ್ತು ಇಂಪೆಡೆನ್ಸ್-ಕಪಲ್ಡ್ ಆ್ಯಂಪ್ಲಿಫೈಯರ್ಗಳು, ಫ್ರೀಕ್ವೆನ್ಸಿ ರೆಸ್ಪಾನ್ಸ್, ವರ್ಗ-ಎ, ವರ್ಗ-ಬಿ, ವರ್ಗ-ಸಿ, ಆಪರೇಷನ್ ಆಫ್ ವೋಲ್ಟೇಜ್ ಆ್ಯಂಪ್ಲಿಫೈಯರ್ ಮತ್ತು ಪವರ್ ಆ್ಯಂಪ್ಲಿ ಫೈಯರ್, ವಿದ್ಯುತ್ ಆ್ಯಂಪ್ಲಿಫೈಯರ್ ನ ದಕ್ಷತೆಗಳು, ಪುಶ್-ಪುಲ್ ವರ್ಕಿಂಗ್ ನೆಗೆಟಿವ್ (ಋಣಾತ್ಮಕ) ಫೀಡ್ ಬ್ಯಾಕ್ ಆ್ಯಂಪ್ಲಿಫೈಯರ್, ಸಿ.ಸಿ. ಆ್ಯಂಪ್ಲಿಫೈಯರ್ಗಳು ರೇಡಿಯೊ ಫ್ರೀಕ್ವೆನ್ಸಿ, ವೋಲ್ಟೇಜ್ ಮತ್ತು ಪವರ್ ಆ್ಯಂಪ್ಲಿಫೈಯರ್ಗಳು ಫೀಡ್ ಮತ್ತು ನ್ಯೂಟ್ರಾಲೈಸ್ಸಿಂಗ್/ತಟಸ್ಥಗೊಳಿಸುವ ಸರ್ಕ್ಯೂಟ್.

**4**. ವ್ಯಾಕ್ಯೂಮ್ ಟ್ಯೂಬ್ಸ್ ನ ಆಸ್ಸಿಲೇಟರ್ಸ್ ಮತ್ತು ಸಾಮಾನ್ಯ ಆಸ್ಸಿಲೇಟರ್ಸ್.

**5**. ಹೊಂದಾಣಿಕೆ ಮತ್ತು ಪತ್ತೆ: ಸರಳ ಮತ್ತು ಸೂಪರ್ ಹೆಟೆರೊಡೈನ್‌ನ ರಿಸೀವ್‌ಗಳ ತತ್ವಗಳು

**6.** ಗ್ಯಾಸ್ ಡೌನ್ಸೆಂಡ್ ಡಿಸ್ಚಾರ್ಜ್, ಗ್ಲೋ ಡಿಸ್ಚಾರ್ಜ್, ಆರ್ಕ್ ಡಿಸ್ಚಾರ್ಜ್, ಫೆನಾಟ್ರಾನ್ಸ್ ಮತ್ತು ಥುರಾಟ್ರಾನ್ಸ್ ಫೇಸ್ ಶಿಫ್ಟ್‌ಗಳ ಗುಣಲಕ್ಷಣಗಳು

**7**. ಕ್ಯಾಥೋಡ್ ರೇ ಟ್ಯೂಬ್ ನಿರ್ಮಾಣ, ಕಾರ್ಯಾಚರಣೆ ಮತ್ತು ಸರಳ ಅನ್ವಯ.

**8**. ಫೋಟೋ- ಎಲೆಕ್ಟ್ರಿಕ್ ಸೆಲ್ಸ್ ತತ್ವ, ಗುಣಲಕ್ಷಣಗಳು ಮತ್ತು ಸಿಂಪಲ್ ಆಪ್ಲಿಕೇಷನ್.

**9.** ಸರಳ ಕೈಗಾರಿಕಾ ಆಪ್ಲಿಕೇಷನ್.

(ಎ) ಮೋಟಾರ್ ಕಂಟ್ರೋಲ್ ಸರ್ಕ್ಯೂಟ್.
(ಬಿ) ವೆಲ್ಡಿಂಗ್ ಎಕ್ಯುಪ್‌ಮೆಂಟ್ ಕಂಟ್ರೋಲ್ ಸರ್ಕ್ಯೂಟ್.
(ಸಿ) ಹೊಯಿಸ್ಟ್ ಕಂಟ್ರೋಲ್
(ಡಿ) ಗ್ಲೋ ಟ್ಯೂಬ್ ವೋಲ್ಟೇಜ್ ರೆಗ್ಯುಲೇಟರ್

**ಅನುಸೂಚಿ – III (Schedule – III)**

**ಭಾಗ – 1**

**ಅಭಿಮತ : ಇಚ್ಛಾಪತ್ರ**

**FORM OF OPTION ; WILLINGNESS**

**ವಿಷಯ:** ಕರ್ನಾಟಕ ಸಣ್ಣ ನೀರಾವರಿ ಇಲಾಖೆಗೆ ಹೊಸದಾಗಿ ರೂಪಿಸಿ ಹೊರಡಿಸಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿರುವಂತೆ ಸಣ್ಣ ನೀರಾವರಿ ಇಲಾಖೆಯಲ್ಲಿ ಶಾಶ್ವತವಾಗಿ ವಿಲೀನಗೊಳ್ಳಲು ನನ್ನ ಅಭಿಮತ : ಇಚ್ಛಾಪತ್ರ (Option: Willingness) ನೀಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಅಧಿಸೂಚನೆ ಸಂಖ್ಯೆ:

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಅಧಿಸೂಚನೆ ಮೇರೆಗೆ ಸಣ್ಣ ನೀರಾವರಿ ಇಲಾಖೆಗೆ ಹೊಸದಾಗಿ ರೂಪಿಸಿ ಹೊರಡಿಸಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿರುವಂತೆ ಸಣ್ಣ ನೀರಾವರಿ ಇಲಾಖೆಯಲ್ಲಿ ಶಾಶ್ವತವಾಗಿ ವಿಲೀನಗೊಳ್ಳಲು ನನ್ನ ಅಭಿಮತ : ಇಚ್ಛಾಪತ್ರ (Option: Willingness) ವನ್ನು ಈ ಮೂಲಕ ಸಲ್ಲಿಸುತ್ತಿದ್ದೇನೆ.

ಅಧಿಕಾರಿ : ನೌಕರರ ಸಹಿ

ಅಧಿಕಾರಿ : ನೌಕರರ ಹೆಸರು

ಅಧಿಕಾರಿ : ನೌಕರರ ಪದನಾಮ

ಕಚೇರಿ ವಿಳಾಸ

## ಭಾಗ-2

ಕೆಜಿಐಡಿ ಪಾಲಿಸಿ ಸಂ:

(ಮೊದಲ ಕೆಜಿಐಡಿ ಪಾಲಿಸಿ ಸಂಖ್ಯೆಯನ್ನು ನಮೂದಿಸಬೇಕು, ಕೆಜಿಐಡಿ ಪಾಲಿಸಿ ಸಂಖ್ಯೆ ಲಭ್ಯವಿಲ್ಲದಿದ್ದರೆ ಇದನ್ನು ಖಾಲಿ ಬಿಡಬೇಕು)

| | | |
|---|---|---|
| ಎ | ಹೆಸರು<br>(ಸೇವಾ ಪುಸ್ತಕದಲ್ಲಿ ನಮೂದಿಸಿರುವಂತೆ, ಪತ್ರಾಂಕಿತ ಅಧಿಕಾರಿಗಳಾಗಿದ್ದರೆ ಮಹಾಲೇಖಪಾಲರ ವೇತನ ಚೀಟಿಯಲ್ಲಿರುವಂತೆ) | |
| ಬಿ | ಪದನಾಮ (ಪದಗ್ರಾಹಿ ಹುದ್ದೆ) | |
| ಸಿ | ಪ್ರಸ್ತುತ ವೃಂದದಲ್ಲಿನ ಜೇಷ್ಠತಾ ಪಟ್ಟಿಯ ಸಂಖ್ಯೆ | |
| ಡಿ | ಹುಟ್ಟಿದ ದಿನಾಂಕ | |
| ಇ | ಸೇವೆಗೆ ಸೇರಿದ ದಿನಾಂಕ<br>(ನಿಯಮಗಳ ನಂತರ ಪ್ರಾರಂಭಿಕ ನೇಮಕಾತಿ) | |
| ಎಫ್ | ಲಿಂಗ | |
| ಜಿ | ತಂದೆಯ ಹೆಸರು | |
| ಹೆಚ್ | ಜಾತಿ | |
| ಐ | ಉಪ-ಜಾತಿ | |
| ಜೆ | ವೈವಾಹಿಕ ಸ್ಥಿತಿಗತಿ | |
| ಕೆ | ಪತಿ/ಪತ್ನಿ ಕಾರ್ಯನಿರ್ವಹಿಸುತ್ತಿದಾರೆಯೇ- | |
| ಎಲ್ | ಕಾರ್ಯ ನಿರ್ವಹಿಸುತ್ತಿದ್ದರೆ,<br>(ರಾಜ್ಯ ಸರ್ಕಾರವೇ/ಕೇಂದ್ರ ಸರ್ಕಾರವೇ/ಸಾರ್ವಜನಿಕ ವಲಯದ ಉದ್ಯಮವೇ/ ಇತ್ಯಾದಿ ಎಂಬುದನ್ನು ದಯವಿಟ್ಟು ನಿರ್ದಿಷ್ಟಪಡಿಸಿ) | |
| ಎಮ್ | ಖಾಯಂ ವಿಳಾಸ | |
| ಎನ್ | ಸಂಪರ್ಕ ವಿಳಾಸ<br>(ಮೇಲಿನದಲ್ಲದೆ ಬೇರೆಯದಾಗಿದ್ದರೆ ಮಾತ್ರ) | |

| | | |
|---|---|---|
| ಓ | ಕಛೇರಿ ದೂರವಾಣಿ ಸಂಖ್ಯೆ (ಕಡ್ಡಾಯವಾಗಿ) | |
| ಪಿ | ವೈಯಕ್ತಿಕ ದೂರವಾಣಿ ಸಂಖ್ಯೆ (ಸ್ಥಿರ ದೂರವಾಣಿ) | |
| ಕ್ಯೂ | ವೈಯಕ್ತಿಕ ದೂರವಾಣಿ ಸಂಖ್ಯೆ (ಮೊಬೈಲ್) | |

ದಿನಾಂಕ: ನೌಕರನ ಸಹಿ

ಸ್ಥಳ:

## ಭಾಗ – 3
## ಆರಂಭಿಕ ನೇಮಕಾತಿ ವಿಧಾನ

| | | |
|---|---|---|
| ಡಿಡಬ್ಲ್ಯೂಎಸ್ (ದಿನಗೂಲಿ ನೌಕರರು) | ಡಿಡಬ್ಲ್ಯೂಎಸ್ ನೌಕರರಾಗಿ ಸೇರಿದ ದಿನಾಂಕ | |
| | ಕ್ರಮಬದ್ಧಗೊಳಿಸುವಿಕೆಯ ದಿನಾಂಕ | |
| | ಹುದ್ದೆಯನ್ನು ಕ್ರಮಬದ್ಧಗೊಳಿಸಲಾದ ಆದೇಶದ ಸಂಖ್ಯೆ ಮತ್ತು ದಿನಾಂಕ | |
| | ಕ್ರಮಬದ್ಧಗೊಳಿಸಲಾದುದು | |
| | ಮಂಜೂರಾದ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದಾರೆಯೇ | |
| | ಮಂಜೂರಾದ ಹುದ್ದೆಯಲ್ಲಿ ಯಾವ ದಿನಾಂಕದಿಂದ ಕಾರ್ಯನಿರ್ವಹಿಸುತ್ತಿರುವರು | |
| ಡಬ್ಲ್ಯೂ ಸಿ (ವರ್ಕ್ ಚಾರ್ಟ್ ಎಸ್ಟಾಬ್ಲಿಷ್‌ಮೆಂಟ್) | ಡಬ್ಲ್ಯೂ ಸಿ ನೌಕರರಾಗಿ ಸೇರಿದ ದಿನಾಂಕ | |
| | ಕ್ರಮಬದ್ಧಗೊಳಿಸುವಿಕೆಯ ದಿನಾಂಕ | |
| | ಹುದ್ದೆಯನ್ನು ಕ್ರಮಬದ್ಧಗೊಳಿಸಲಾದುದು | |

| | | |
|---|---|---|
| | ಕ್ರಮಬದ್ಧಗೊಳಿಸಲಾದ ಆದೇಶದ ಸಂಖ್ಯೆ ಮತ್ತು ದಿನಾಂಕ | |
| | ಮಂಜೂರಾತಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಯೇ? ಯಾವ ದಿನಾಂಕದಿಂದ ಕಾರ್ಯನಿರ್ವಹಿಸುತ್ತಿರುವವರು ಮಂಜೂರಾದ ಹುದ್ದೆಯಲ್ಲಿ | |
| ಎಲ್.ಸಿ (ಸ್ಥಳೀಯ ಅಭ್ಯರ್ಥಿ) | ಡಬ್ಲ್ಯೂಸಿ ನೌಕರರಾಗಿ ಸೇರಿದ ದಿನಾಂಕ | |
| | ಕ್ರಮಬದ್ಧಗೊಳಿಸುವಿಕೆಯ ದಿನಾಂಕ | |
| | ಹುದ್ದೆಯನ್ನು ಕ್ರಮಬದ್ಧಗೊಳಿಸಲಾದುದು | |
| | ಕ್ರಮಬದ್ಧಗೊಳಿಸಲಾದ ಆದೇಶದ ಸಂಖ್ಯೆ ಮತ್ತು ದಿನಾಂಕ | |
| | ಮಂಜೂರಾದ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಯೇ? | |
| | ಮಂಜೂರಾದ ಯಾವ ದಿನಾಂಕದಿಂದ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರು? | |
| ಅನುಕಂಪದ ಆಧಾರ | ಸೇವೆಗೆ ಸೇರಿದ ದಿನಾಂಕ | |
| | ಆದೇಶ ಸಂಖ್ಯೆ ಮತ್ತು ದಿನಾಂಕ | |
| ನೇರ ನೇಮಕಾತಿ | ಇಲಾಖಾ ನೇಮಕಾತಿ ಸಮಿತಿ | |
| | ಹೆಚ್ಎಫ್ಎಸ್ಸಿ | |
| | ಉದ್ಯೋಗ ವಿನಿಯಮ | |
| | ನೇಮಕಾತಿ ಆದೇಶದ ಸಂಖ್ಯೆ ಮತ್ತು ದಿನಾಂಕ | |

ದಿನಾಂಕ:

ಸ್ಥಳ:

ನೌಕರನ ಸಹಿ

## ಭಾಗ – 4
## ಆರಂಭಿಕ ನೇಮಕಾತಿ ವಿಧಾನ

| ಕ್ರಮ ಸಂಖ್ಯೆ | ಶೈಕ್ಷಣಿಕ ವಿದ್ಯಾರ್ಹತೆ | ಉತ್ತೀರ್ಣ/ತೇರ್ಗಡೆಯಾದ ವರ್ಷ | ಶಾಲೆ/ಕಾಲೇಜು/ ವಿಶ್ವವಿದ್ಯಾಲಯ | ಷರಾಗಳು |
|---|---|---|---|---|
| 1 | ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮೋ (ಸಾಮಾನ್ಯ) | | | |
| 2 | ಬ್ಯಾಚುಲರ್ ಆಫ್ ಇಂಜಿನಿಯರಿಂಗ್ (ಸಿವಿಲ್ ಇಂಜಿನಿಯರಿಂಗ್) | | | |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪಂಪನಗೌಡ ಮೇಲ್ಸೀಮೆ )
ಸರ್ಕಾರದ ಜಂಟಿ ಕಾರ್ಯದರ್ಶಿ
ಸಣ್ಣ ನೀರಾವರಿ ಮತ್ತು ಅಂತರ್ಜಲ
ಅಭಿವೃದ್ಧಿ ಇಲಾಖೆ.